ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೨ ಜುಲೈ ೨೦೦೨ ಸಂಚಿಕೆ ೧೨

ಭಾರತಿ ಬಂಜೆಯಲ್ಲ

★

ಎಲ್ಲ ಧರ್ಮಗಳ ಧ್ಯೇಯ: ಸೌಹಾರ್ದತೆ

ಹುತಾತ್ಮ ಭಗತ್‌ಸಿಂಗ್ ಮತ್ತು ಅವರ
ಸಾಮಾಜಿಕ - ರಾಜಕೀಯ ಸಿದ್ಧಾಂತ

ಭಗತ್‌ಸಿಂಗರ ಬಲಿದಾನಕ್ಕೆ ಗಾಂಧೀಜಿಯ ಪ್ರಶಂಸೆ

ದೇಶದ ವಿಭಜನೆ ಮತ್ತು ಗಾಂಧೀ

ಮನುಷ್ಯನ ವಿಕೃತ ಮನಸ್ಸಿನ ಸಂಕೇತ ಗೋಧ್ರಾ

ಎಂ. ಎನ್. ರಾಯ್‌ಯವರ ವಿರುದ್ಧ ಕುಯುಕ್ತಿ
ಒಂದು ನಕಲಿ ಪತ್ರದ ಕಥೆ

★ ಈ ಸಂಚಿಕೆಯಲ್ಲಿ ★

ಜನಪದವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೨ ಸಂಚಿಕೆ: ೧೨

ಜುಲೈ ೨೦೦೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ :
ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ : ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :
ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧
ದೂರವಾಣಿ :
೦೮೨೩೬-೬೪೮೬೬೪

ಮಾಸ್ತಿ ಯಾರು? ಮಾಸ್ತರರು ನನ್ನನ್ನೇ
ನಿಲ್ಲಿಸಿ ಕೇಳಿದ್ದರು.
ಎದ್ದು ನಿಂತಿದ್ದೆ ನಾನು ನೆನೆಯುತ್ತ
ಶೆಲ್ಲಿ ಷೇಕ್ಸ್‌ಪಿಯರ್‌ರ ನಡುವೆ
ಮಹಾಕವಿ ಸಾಫೋಕ್ಲೀಸ್‌ನಿಂದ ಹಿಡಿದು
ಮೊನ್ನೆಯ ಕ್ರಾಂತಿಕವಿ ಬೆಂಜಮಿನ್ನನವರೆಗೆ
ಪಾಲ್ಲೋ ನೆರೂದಾಗಳ, ಬರ್ನಾಡ್ ಷಾಗಳ
ಪಕ್ಕ ಸರಿಸಿದ್ದೆ. ಆದರೂ ನೆನಪಾಗಲಿಲ್ಲ
ಹಾಳು ದರಿದ್ರದವ ಇವನೆಂದು ಬದುಕಿದ್ದ
ಪಂಪ ರನ್ನರಿಗಿಂತ ಮೊದಲಿನವನಿರಬೇಕು
ಮುಜುಗರದಿ ನೆಲ ನೋಡುತ್ತಿದ್ದೆ ಡೆಸ್ಕಿನಾ
ಕೆಳಗೆ ಹೂವರಳುತ್ತಿದ್ದವು. ಹುಡುಗಿಯರ
ಹಲ್ಲುಗಳು ಮುಳ್ಳುಗಳಂತಿದ್ದವು.
ಮಾಸ್ತರರು ಹೇಳುತ್ತಿದ್ದರು ಮುಂದೆ
"ಮಾಸ್ತಿ ನಮ್ಮ ಕನ್ನಡದಖ್ಯಾತ ಸಾಹಿತಿ.
ಎಲಾ ಎಲಾ, ಇಷ್ಟು ಹತ್ತಿರದವನೇ
ಈ ಹಣ್ಣು ಹಣ್ಣು ಮುದುಕ
ಆ ಮನೆಯ ಅಂಚಿಗೆ ಒರಗಿ ದಿನವೂ ಸಂಜೆ
ಕಾಯುತ್ತಿದ್ದ. ಪಕ್ಕದಲ್ಲೊಂದು ಕೋಲು
ಇರುತ್ತಿತ್ತು. ಇದೇ ಮುದುಕನ ಮೇಲೆ
ದಿನ ದಿನವೂ ನಾನು ನಾಯಿ ಛೂ ಬಿಟ್ಟಿದ್ದೆ
ಮುದುಕ ಗಾಬರಿಯಾದಾಗ ನಾ ಖುಷಿ
ಗೊಂಡಿದ್ದೆ ಒಮ್ಮೆಯಾದರೂ ಹೇಳಬಾರದೆ
ಮುದುಕ ತಾನೆಂದು "ಕತೆಗಾರ ಶ್ರೀನಿವಾಸ
ಆತ ಎಂದೂ ಸಿಡುಕಿರಲೇ ಇಲ್ಲ
ಎಂಥ ಸೌಜನ್ಯ ಮೂರ್ತಿ ಪ್ರೀತಿ ಉಕ್ಕಿ
ಬಂತು ಕ್ಲಾಸಿನನಂತರ ಕಾಣಬೇಕೆಂದು
ಕೊಂಡೆ. ಮಾಸ್ತರರೆಂದರು ಮಾಸ್ತಿ
ಇನ್ನಿಲ್ಲ. ನಮಗೆ ದುಃಖ ಒತ್ತರಿಸಿ ಬಂತು.
ಹೃದಯ ಪದರಗಳ ನಡುವೆ ಮಾಸ್ತಿ ಮರೆತ
ಕೋಲು ಅಜ್ಜನ ಕೋಲಿದು ನನ್ನಯ
ಕುದುರೆ ರೇಸಿಗೆ ಓಡುತ್ತಿತ್ತು

ನಾರಾಯಣಸ್ವಾಮಿ ಕುಪ್ಪೂರು

ವಿಚಾರ ದೀಪ್ತಿ.....................

ಹೆಣ್ಣು ಎಂದಾಕ್ಷಣ ಮೂಡುವ ಬಿಂಬ... ಸೌಂದರ್ಯದ ಪ್ರತೀಕ, ಅಬಲೆ, ಆಶ್ರಯವಿಲ್ಲದೆ ಜೀವನ ಸಾಗಿಸಲಾರದ ಪರಾವಲಂಬಿ. ಹುಟ್ಟಿನಿಂದ ಕೊನೆಯವರೆಗೆ ಸ್ವಾತಂತ್ರ್ಯವನ್ನು ಅನುಭವಿಸದೆ, ಗಂಡಿನ ಆಶ್ರಯ-ದಲ್ಲಿ ಇರುವಾಕೆ. ಎಂದಿಗೂ ಆಕೆಯ ಆಶೋತ್ತರಗಳಿಗೆ ಬೆಲೆಯಿಲ್ಲ. ಕೇವಲ ಪುರುಷ ಸಮಾಜದ ಹಿಂಬಾಲಕಿ ನೆರಳು ಮಾತ್ರ. ತಾಯಿ, ಮಗಳು, ಸೊಸೆ, ಹೆಂಡತಿ ಈ ನಾಲ್ಕು ಹಂತಗಳಲ್ಲಿ ಅವಳ ಸ್ಥಾನಮಾನ.

ಸಂಸ್ಕೃತದಲ್ಲಿ ಹೆಣ್ಣಿನ ಗುಣಗಳನ್ನು ವರ್ಣಿಸುವ ಸೂಕ್ತಿಯೊಂದಿದೆ. "ಕಾರ್ಯದಲ್ಲಿ ದಾಸಿಯಂತೆ, ಪಾಲನೆಯಲ್ಲಿ ತಾಯಿಯಂತೆ, ಶಯನದಲ್ಲಿ ರಂಭೆಯಂತೆ, ಸಲಹಾ ಕಾರ್ಯದಲ್ಲಿ ಮಂತ್ರಿಯಂತೆ ಗಂಡನನ್ನು ನೋಡಿಕೊಳ್ಳಬೇಕು" ಎಂದು. ಕೆಲಸ ಕಾರ್ಯದಲ್ಲಿ, ಬೇಕು-ಬೇಡಗಳನ್ನು ನೋಡಿಕೊಳ್ಳುವಲ್ಲಿ, ಶಯನದಲ್ಲಿ ಕ್ರಮವಾಗಿ ದಾಸಿ, ತಾಯಿ, ರಂಭೆಯ ಸ್ಥಾನವನ್ನು ಹೆಣ್ಣಿಗೆ ಪುರುಷ ಕೊಟ್ಟನೆ ಹೊರತು; ಸಲಹೆಯಲ್ಲಿ ಮಂತ್ರಿಯ ಸ್ಥಾನವನ್ನು ಕೊಟ್ಟ ನಿದರ್ಶನಗಳು ಕಡಿಮೆಯೇ. ಏಕೆಂದರೆ 'ಸ್ತ್ರೀ ಬುದ್ಧಿ ಏನಿದ್ದರೂ ಮೊಣಕಾಲ ಕೆಳಗೆ'. ಈ ನಾಣ್ನುಡಿ ಜನಜನಿತವಾಗಿರಬೇಕಾದರೆ ಮಹಿಳೆಯ ಸ್ಥಾನಮಾನ ಸಂಸಾರದಲ್ಲಿ ಏನು ಎಂದರ್ಥವಾಗುತ್ತದೆ.

ಇದೆಲ್ಲದರ ಜೊತೆಗೆ ಸಾಮಾಜಿಕ ಕಟ್ಟುಪಾಡುಗಳು, ಧರ್ಮದ ಬಿಗಿಮುಷ್ಟಿ - ಇವೆಲ್ಲವುಗಳು ಹೆಣ್ಣನ್ನು ಹೊಸ್ತಿಲಿನ ಒಳಗೆ ಇರಿಸಿಬಿಟ್ಟಿದೆ. ಆಕಸ್ಮಿಕ ಹೊರಬಂದರೆ ಆಕೆ ಮೂರನ್ನೂ ಬಿಟ್ಟವಳಾಗಿರಬೇಕು, ಇಲ್ಲವೇ ಸೂಳೆಯಾಗಿರಬೇಕು. ಇಂಥ ಹಣೆಪಟ್ಟಿಯನ್ನು ಬದಲಿಸುವಲ್ಲಿ ಆಕೆಯ ಪ್ರಯತ್ನ ಕಡಿಮೆಯೆಂದೇ ಹೇಳಬೇಕು. ಏಕೆಂದರೆ ಬಹುತೇಕರು ಈ ಸ್ಥಿತಿಯೇ ನಮ್ಮ ನಿಜವಾದ ಸ್ಥಿತಿಯೆಂದೆ ಭ್ರಮಿಸಿ, ಆ ಭ್ರಾಮಿಕ ಪ್ರಪಂಚದಲ್ಲೇ ಕೊನೆಯುಸಿರು ಬಿಡುವವರಾಗಿದ್ದಾರೆ. ಹಾಗಿದ್ದ ಮೇಲೆ ಪ್ರತಿಭಟನೆ, ಬಂಡಾಯ, ಅನ್ಯಾಯದ ವಿರುದ್ಧ ಸೆಟೆದು ನಿಲ್ಲುವ ಪ್ರವೃತ್ತಿ ತಾನೆ ಎಲ್ಲಿಂದ ಬರಬೇಕು?

— ಡಾ॥ ವೀಣಾ ಶಾಂತೇಶ್ವರ

ಭಾರತಿ ಬಂಜೆಯಲ್ಲ!

– ಸುರೇಂದ್ರಕೌಲಗಿ

ಒಂದು ನೂರು ಕೋಟಿ ಪ್ರಜಾ ಸಂಖ್ಯೆಯನ್ನೂ, ಹಲವಾರು ಧರ್ಮಗಳನ್ನೂ, ಭಾಷೆಗಳನ್ನೂ ಹೊಂದಿರುವ ಭಾರತಮಾತೆ ಬಂಜೆಯೆಂದು ಹೇಳಲು ಹೇಗೆ ತಾನೆ ಸಾಧ್ಯ? ಅಲ್ಲದೆ, ವಿಶ್ವದಲ್ಲಿ ಅತ್ಯಂತ ಪುರಾತನವಾದ, ಶ್ರೇಷ್ಠತಮವಾದ ಸಂಸ್ಕೃತಿಯನ್ನು ಹೆಂದಿರುವ ಹೆಗ್ಗಳಿಕೆ ಭಾರತಮಾತೆಯದಾಗಿದೆ. ಆದ್ದರಿಂದ ಭಾರತಿ ಬಂಜೆಯಲ್ಲ ಎಂಬುದು ಸರ್ವವಿದಿತವಾದ ಸಂಗತಿ. ಇತ್ತೀಚಿಗಿನ ಒಂದು ಘಟನೆಯಿಂದಲೂ ಸಹ ಭಾರತ ಮಾತೆ ಬಂಜೆಯಲ್ಲ ಎಂದು ಹೇಳಬಹುದಾಗಿದೆ, ಆ ಘಟನೆ ೧೨ನೇ ರಾಷ್ಟ್ರಪತಿಯ ಆಯ್ಕೆಗೆ ಸಂಬಂಧಿಸಿದ್ದಾಗಿದೆ. ಈಗಿರುವ ರಾಷ್ಟ್ರಪತಿ ಕೆ. ಆರ್. ನಾರಾಯಣನ್ ನಿವೃತ್ತಿಯಾದ ನಂತರ ರಾಷ್ಟ್ರಪತಿಯಾಗಲು ಅರ್ಹ ವ್ಯಕ್ತಿ ಯಾರು ಎಂಬ ಶೋಧನೆ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಕೇಳಿ ಬಂದ ಹಲವಾರು ಹೆಸರುಗಳು ಆ ಉನ್ನತ ಸ್ಥಾನಕ್ಕೆ ಸೂಕ್ತವಲ್ಲವೆಂದೆನಿಸಿದವು. ಶೋಧನೆ ತೀವ್ರಗೊಂಡಿತು. ಇಷ್ಟು ದೊಡ್ಡ ಜನಸಂಖ್ಯೆಯಲ್ಲಿ ಮತ್ತು ಬಹು ಧರ್ಮೀಯ ದೇಶದಲ್ಲಿ ಅರ್ಹರಾದ ವ್ಯಕ್ತಿಯೊಬ್ಬ ಸಿಗಲಾರನೆ ಎಂದೆನಿಸಲು ಪ್ರಾರಂಭವಾಯಿತು, ಆದರೆ ಆ ಅನಿಸಿಕೆ ಈಗ ಸುಳ್ಳಾಗಿದೆ.

ಇದುವರಗೆ ನಮ್ಮ ದೇಶಕ್ಕೆ ನಾಯಕತ್ವ ಬೇಕಾದ ಸಂದರ್ಭ ಒಂದಾಗಲೆಲ್ಲ ಸೂಕ್ತ ವ್ಯಕ್ತಿಗಳು ಕ್ಷಿತಿಜದಲ್ಲಿ ಕಾಣಿಸಿಕೊಂಡಿದ್ದಾರೆ ಮತ್ತು ಅವರು ದೇಶದ ಕರ್ಣಧಾರರಾಗಿ ಸಮರ್ಥವಾಗಿ ದೇಶವನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಇಂಥ ಒಂದು ಆರೋಗ್ಯಕರವಾದ ಬೆಳವಣಿಗೆಯ ಅಂಕುರಾರ್ಪಣೆ ಕೃತಯುಗದಿಂದಲೇ ಪ್ರಾರಂಭವಾಗಿದೆ. ಹಿಂದಿನ ಆಯಾ ಯುಗಗಳಲ್ಲಿ ಜನ್ಮವೆತ್ತಿ ಬಂದ ಮಹನಿಯರ ಆ ಸಾಧನೆಗಳು ಈ ಮಾತನ್ನು ದೃಢೀಕರಿಸುತ್ತವೆ. ಭಾರತ ೧೫೨೬ರಲ್ಲಿ ಮೊಗಲರ ಆಗಮನದ ಕಾಲದಿಂದ ಪರಾಧೀನವಾಯಿತು. ಅಂದಿನಿಂದಲೇ ಭಾರತವನ್ನು ಸ್ವತಂತ್ರಗೊಳಿಸುವ ಮಹದೊದ್ದೇಶದಿಂದ ಕಾಲಕಾಲಕ್ಕೆ ಯೋಗ್ಯ ನಾಯಕರು ಜನಿಸಿ ದೇಶದ ರಾಜಕೀಯ ರಂಗದ ಮೇಲೆ ಬಂದು ಸಾಮಾಜಿಕ, ರಾಜಕಿಯ, ಸಾಂಸ್ಕೃತಿಕ ಮತ್ತು ಆರ್ಥಿಕಕ್ಷೇತ್ರಗಳಲ್ಲಿ ದೇಶವನ್ನು ಮುನ್ನಡೆಸುತ್ತಾ ಬಂದಿದ್ದಾರೆ. ಈ ಪರಂಪರೆಗೆ ತನ್ನದೇ ಆದ ಇತಿಹಾಸವಿದೆ. ವೈಭವವಿದೆ, ಈ ಪರಂಪರೆಯಲ್ಲಿ ನಾವು ಹೆಸರಿಸಬಹುದಾದ ಮಹನಿಯರು ಸಾಯಣಾಚಾರ್ಯ, ಮಹಾತ್ಮಾಗಾಂಧಿ, ದಯಾನಂದ ಸರಸ್ವತಿ, ಅರವಿಂದ ಘೋಷ್, ರಾಜರಾಮ್ ಮೋಹನರಾಯ್, ವಿವೇಕಾನಂದ, ಕೃಷ್ಣದೇವರಾಯ, ಕಬೀರ್, ನಾನಕ್, ಮಹಾರಾಣಾ ಪ್ರತಾಪ್, ಟಿಪ್ಪುಸುಲ್ತಾನ್, ಸುಬ್ರಹ್ಮಣ್ಯ ಭಾರತಿ, ಜಮ್‌ಶೇಠ್‌ಜಿ ಟಾಟಾ ಮುಂತಾದವರು. ಈ ಎಲ್ಲ ವ್ಯಕ್ತಿಗಳು ಜನಿಸಿದ ಕಾಲದಲ್ಲಿ ಭಾರತದಲ್ಲಿದ್ದ

ರಾಜಕೀಯ, ಸಾಂಸ್ಕೃತಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಇವರು ಕೈಗೊಂಡ ದೇಶ ರಕ್ಷಣೆ ಮತ್ತು ದೇಶ ನಿರ್ಮಾಣ ಕಾರ್ಯಗಳನ್ನು ಗಮನಿಸಿದಾಗ ಇವರು ಸಲ್ಲಿಸಿದ ಸೇವೆಯ ಐತಿಹಾಸಿಕ ಮಹತ್ವದ ಅರಿವು ನಮಗೆ ಉಂಟಾಗುತ್ತದಲ್ಲದೆ, ಹೇಗೆ ಅಂದಿನ ರಾಷ್ಟ್ರೀಯ ಸಮಸ್ಯೆಗೆ ಅನುಗುಣವಾಗಿ ಸಮರ್ಥ ವ್ಯಕ್ತಿಗಳು ಭಾರತದ ರಂಗ ಮಂಟಪದ ಮೇಲೆ ಕಾಣಿಸಿಕೊಳ್ಳುತ್ತಾ ಬಂದರು ಎಂಬುದೂ ಗೊತ್ತಾಗುತ್ತದೆ. ಅಲ್ಲದೆ ದೇಶಕ್ಕೆ ಸಮರ್ಥರೂ, ಸುಯೋಗ್ಯರೂ ಆದ ಸುಪುತ್ರರನ್ನು ಕಾಣಿಕೆಯಾಗಿ ಕೊಡುವಲ್ಲಿ ಭಾರತಿ ಎಂದೂ ಸೋತಿಲ್ಲವೆಂದೂ ಗೊತ್ತಾಗುತ್ತದೆ. ೧೮೫೭ ರ ಮೊದಲ ಸ್ವಾತಂತ್ರ್ಯ ಯುದ್ಧದಿಂದ ಹಿಡಿದು ೧೯೪೭ ರ ಸ್ವಾತಂತ್ರ್ಯ ಹೋರಾಟದ ವರೆಗೆ, ಆನಂತರ ೧೯೭೭ರ ಪ್ರಜಾಪ್ರಭುತ್ವದ ಮರುಹುಟ್ಟಿನ ಸಂಪೂರ್ಣಕ್ರಾಂತಿಯ ವರೆಗೆ ನಾಯಕತ್ವದ ಸರಣಿ ಅವಿಚ್ಛಿನ್ನವಾಗಿ ಉಳಿದುಕೊಂಡು ಬಂದಿದೆ ಎಂಬ ಸಂಗತಿಯೂ ಸಹ ಭಾರತಿ ಬಂಜೆಯಲ್ಲ ಎಂಬುದನ್ನು ಸಿದ್ಧಮಾಡಿತೋರಿಸಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾದ ಮೇಲೆ ೧೯೫೨ ರಿಂದ ರಾಷ್ಟ್ರಪತಿ ಆಯ್ಕೆ ಪ್ರಾರಂಭವಾಯಿತು, ಅಂದಿನಿಂದ ಇಂದಿನವರೆಗೆ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿದ ವ್ಯಕ್ತಿಗಳಲ್ಲಿ ಒಬ್ಬಿಬ್ಬರನ್ನು ಬಿಟ್ಟರೆ ಉಳಿದವರೆಲ್ಲರೂ ದೇಶದ ಗೌರವ ಘನತೆಯನ್ನು ಉಳಿಸಿದ್ದಾರೆ, ಹೆಚ್ಚಿಸಿದ್ದಾರೆ. ಇದುವರೆಗೆ ಯೋಗ್ಯ ರಾಷ್ಟ್ರಪತಿಯನ್ನು ಪಡೆಯಲು ಎಂದೂ ಕಷ್ಟವಾಗಿಲ್ಲ. ಈಗ ೨೦೦೨ ರಲ್ಲಿ ಹನ್ನೆರಡನೇ ರಾಷ್ಟ್ರಪತಿಯನ್ನು ಆಯ್ಕೆ ಮಾಡಬೇಕಾದ ಸಮಯದಲ್ಲೂ ರಾಷ್ಟ್ರಕ್ಕೆ ಅಬ್ದುಲ್‌ಕಲಾಂರಂಥ ಯೋಗ್ಯ ವ್ಯಕ್ತಿ ದೊರೆತದ್ದು ಭಾರತಿಯ ಸಮಾಜದ ನೈಜ ಸಾಮರ್ಥ್ಯವನ್ನು ತೋರಿಸುತ್ತದೆ. ವಿಶ್ವದಲ್ಲಿ ಅನೇಕ ದೇಶಗಳಿವೆ. ಆ ಎಲ್ಲ ದೇಶಗಳೂ ಒಂದಲ್ಲ ಒಂದು ರೀತಿಯ ರಾಷ್ಟ್ರಾಧ್ಯಕ್ಷನನ್ನು ಅಥವಾ ರಾಷ್ಟ್ರಪತಿಯನ್ನು ಪಡೆದಿವೆ, ಆದರೆ ಆ ನಾಯಕತ್ವವನ್ನು ಪಡೆದ ರೀತಿ ಮತ್ತು ಆ ರಾಷ್ಟ್ರ ನಾಯಕರು ನಡೆದುಕೊಂಡ ರೀತಿ ಇವುಗಳನ್ನು ಗಮನಿಸಿದಾಗ ನಮ್ಮ ದೇಶಕ್ಕಿಂತ ಬಹಳ ದೊಡ್ಡ ವ್ಯತ್ಯಾಸ ಇರುವುದು ಕಂಡು ಬರುತ್ತದೆ. ಅಮೇರಿಕಾದಂಥ ಬಲಾಢ್ಯ ದೇಶದ ಅಧ್ಯಕ್ಷನ ಆಯ್ಕೆಯಾಗಿರಬಹುದು, ತಾಂತ್ರಿಕತೆಯಲ್ಲಿ ಮುಂದುವರೆದಂಥ ಜಪಾನ್ ನಂಥ ದೇಶವಾಗಿರಬಹುದು, ಮಿಲಿಟರಿ ಆಡಳಿತವನ್ನು ಹೊಂದಿರುವಂಥ ಪಾಕಿಸ್ತಾನದಂಥ ದೇಶವಾಗಿರಬಹುದು, ವಿಶ್ವದ ಎಂಟು-ಹತ್ತು ಶ್ರೀಮಂತ ರಾಷ್ಟ್ರಗಳಲ್ಲಿ ಒಂದಾಗಿರುವ ಯೂರೋಪ್ ಖಂಡದ ದೇಶಗಳಾಗಿರಬಹುದು ಅವು ಹೊಂದಿರುವ ರಾಷ್ಟ್ರ ಪ್ರಮುಖರನ್ನು ಗಮನಿಸಿದಾಗ ಆ ವಿಷಯದಲ್ಲಿ ಭಾರತ ವಿಶಿಷ್ಟ ದೇಶವಾಗಿದೆ ಎಂದು ಕಂಡು ಬರಲಾರದೆ ಇರದು.

ಇದಕ್ಕೆ ಮುಖ್ಯ ಕಾರಣ ಬೇರೆ ದೇಶಗಳ ಸಂಸ್ಕೃತಿಯಲ್ಲಿ ಇರದ ತೆರದ ಮನಸ್ಸು ಭಾರತೀಯ ಸಂಸ್ಕೃತಿಯಲ್ಲಿರುವುದು. ಈ ದೇಶದಲ್ಲಿ ವೇದ ಕಾಲ

ದಿಂದ ಹಿಡಿದು ಇಂದಿನ ಅಣುಯುಗದವರೆಗೂ ವಿಶ್ವದ ನಾಲ್ಕೂ ಕಡೆಯಿಂದ ಬಂದ ವಿಚಾರ ಮತ್ತು ಜ್ಞಾನ ಹಾಗೂ ಅದನ್ನು ಜೀರ್ಣಿಸಿಕೊಂಡು ತನ್ನ ದಾಗಿಸಿಕೊಂಡ ಭಾರತೀಯತೆ. ಮಹಾತ್ಮಗಾಂಧೀಜಿ ಹೇಳುತ್ತಿದ್ದುದು ಈ ಮಾತನ್ನೇ:- "ನನ್ನ ಮನೆಯಲ್ಲಿ ನಾಲ್ಕೂ ನಿಟ್ಟಿನಿಂದ ಗಾಳಿ ಬೀಸಲಿ. ಆದರೆ ನಾನು ಮಾತ್ರ ತೂರಿಕೊಂಡು ಹೋಗದಿರಲಿ". ಅಷ್ಟೇ ಏಕೆ ಭಾರತದ ಸಂಸ್ಕೃತಿಯೇ **"ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತ:-** ನಮಗೆ ಭದ್ರವಾದ ವಿಚಾರ, ಭದ್ರವಾದ ಸಂಕಲ್ಪ ಇಡೀ ವಿಶ್ವದೆಲ್ಲೆಡೆಯಿಂದ ಬರಲಿ" ಎಂಬ ಮಂತ್ರದಿಂದಲೇ ಪ್ರಾರಂಭವಾಯಿತು. ಆದ್ದರಿಂದ ಭಾರತದಲ್ಲಿರುವ ಯಾವುದೇ ವ್ಯಕ್ತಿಯಾಗಿರಲಿ ಅವನ ಮೇಲೆ ಇಲ್ಲಿಯ ಗಾಳಿ-ಮಣ್ಣು-ನೀರು-ಮಾನಸ ಉಂಟು ಮಾಡಿದ ಸಂಸ್ಕಾರದ ಪರಿಣಾಮವಾಗಿ ಯೋಗ್ಯನೂ, ಸಮರ್ಥನೂ ಆಗಿರುತ್ತಾನೆ. "ವಿಶ್ವನೀಡಂ" ನ ಕಲ್ಪನೆಯನ್ನು ಹೊಂದಿರುತ್ತಾನೆ. ಈ ಮಾತಿಗೆ ಈಗ ನೂತನ ವಾಗಿ ರಾಷ್ಟ್ರಪತಿಯಾಗಿ ಆಯ್ಕೆಯಾಗಿರುವ ಅಬ್ದುಲ್ ಕಲಾಂ ಉದಾಹರಣೆಯಾಗಿ ದ್ದಾರೆ. ಅವರು ಸರ್ವ ಧರ್ಮ ಸಮನ್ವಯದ ನಾಡು ಭಾರತದ ನಾಡೋಜನಾಗಿ ರಾಷ್ಟ್ರಪತಿಯ ಸ್ಥಾನವನ್ನು ಅಲಂಕರಿಸಲಿದ್ದಾರೆ. ರಾಷ್ಟ್ರದ ಇಂದಿನ ಯುವಕರ ಮನಸ್ಸಿನಲ್ಲಿ ಚೈತನ್ಯ ತುಂಬಲಿದ್ದಾರೆ, ಅವರ ಭಾವನೆಗಳಿಗೆ ಚುರುಕು ಮುಟ್ಟಿಸಲಿ ದ್ದಾರೆ. ಬರಲಿರುವ ದೇಶದ ಸಮಸ್ಯೆಗಳ ಪರಿಹಾರಕ್ಕೆ ತಡಿಯುವ ಯುವ ಪಡೆ ಯನ್ನು ತಯಾರಿಸಲಿದ್ದಾರೆ ಮತ್ತು ಭಾರತಿ ಬಂಜೆಯಲ್ಲ ಎಂಬ ಮಾತನ್ನು ದೃಢ ಪಡಿಸಲಿದ್ದಾರೆ. ಕಲಾಂ ಅವರ ಬಗ್ಗೆ ಇರುವ ಆಶಯಗಳಿಗೆ ಅವರ ಈ ಮಾತು ಗಳು ಆಧಾರವಾಗಿವೆ:-

ಸ್ನೇಹಿತರೆ, ನೀವು ಪ್ರಪಂಚದ ಸುತ್ತೆಲ್ಲಾ ಕಣ್ಣು ಹಾಯಿಸಿದರೆ ಭಾರತ ಹಿಂದುಳಿದಿರುವುದೆಂದು ಭಾವಿಸಬಹುದು. ಅಭಿವೃದ್ಧಿ ಹೊಂದದೆ ಇರುವ ನೂರಾರು ದೇಶಗಳಲ್ಲಿ ಒಂದು ಎಂದೂ ಭಾವಿಸಬಹುದು; ಅಭಿವೃದ್ಧಿ ಹೊಂದಿರುವ ದೇಶಗಳ ಸಮೂಹದಲ್ಲಿ ಭಾರತ ಇಲ್ಲವಲ್ಲ ಎಂದೂ ಭಾವಿಸಬಹುದು. ಆದರೆ ಸಚೇತನ ಮನಸುಳ್ಳ ಕೋಟ್ಯಾವಧಿ ಜನರನ್ನು ತುರಿತು ಆಲೋಚಿಸಿರಿ. ಇದು ಬೇರೆ ಯಾವುದೇ ಸಂಪನ್ಮೂಲಕ್ಕಿಂತ ಶಕ್ತಿದಾಯಕ ಸಂಪನ್ಮೂಲವಾಗಿದೆ. ಈ ಭೂಮಿ ಮೇಲಾಗಲಿ, ಅಂತರಿಕ್ಷಾದಲ್ಲಾಗಲಿ, ಪಾತಾಳದಲ್ಲಾಗಲಿ ಇರಬಹುದಾದ ಯಾವುದೇ ಸಂಪನ್ಮೂಲಕ್ಕಿಂತ ಬಲಿಷ್ಠ ಸಂಪನ್ಮೂಲವಾಗಿದೆ. ನಿಮ್ಮ ಶ್ರಮವೇ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಪರಿವರ್ತಿಸಲು ಸಾಧ್ಯ. ನಾವು ಇಂಥ ಅಭಿವೃದ್ಧಿ ಹೊಂದಿದ ದೇಶಕ್ಕಾಗಿ ಚಳುವಳಿ ಪ್ರಾರಂಭಿಸೋಣ ಮತ್ತು ಆ ಉದ್ದೇಶಕ್ಕಾಗಿ ಕೆಲಸ ಮಾಡೋಣ. ಯಾವುದೇ ಒಂದು ದೇಶ ನಿಜವಾದ ಅರ್ಥ ದಲ್ಲಿ ದೇಶ ಅಥವಾ ರಾಷ್ಟ್ರವಾಗಿ ರೂಪಿತಗೊಳ್ಳಬೇಕಾದರೆ ಅಲ್ಲಿಯ ರಾಷ್ಟ್ರಿಕರು ವಿಶೇಷವಾದ ಗುಣಸಂಪತ್ತುಗಳನ್ನು ಹೊಂದಿರಬೇಕಾಗಿರುತ್ತದೆ. ದೇಶದ ಅಭಿ

ವೃದ್ಧಿಗೆ ಪ್ರಾಕೃತಿಕ ಸಂಪತ್ತುಗಳು ಎಷ್ಟು ಅವಶ್ಯಕವೋ ಅಷ್ಟೇ ಆವಶ್ಯಕ ಅಲ್ಲಿಯ ಜನರಲ್ಲಿಯ ಗುಣೈಶ್ವರ್ಯ ಗಳು. ಇದನ್ನು ತಿಳಿದೇ ನಮ್ಮ ಪೂರ್ವಜರು, ಋಷಿಮುನಿಗಳು ನಾಗರಿಕತೆಯ ಒಂದು ಪರಂಪರೆಯನ್ನೇ ಪೂರ್ವಕಾಲದಿಂದಲೂ ನಡೆಸಿಕೊಂಡು ಬಂದಿದ್ದಾರೆ. ಆ ಪರಂಪರೆಯ ಪ್ರವಾಹದಲ್ಲಿ ಸ್ವಾತಂತ್ರ್ಯೋದಯದ ನಂತರ ಹುಟ್ಟಿ ಬಂದವ್ಯಕ್ತಿಗಳಲ್ಲಿ ಮೂವರು ಪ್ರಮುಖರಾಗಿದ್ದಾರೆ. ಒಬ್ಬರು, ಮಹಾತ್ಮಾಗಾಂಧೀ; ಎರಡನೆಯವರು, ವಿನೋಬಾ ಭಾವೆ ಮತ್ತು ಮೂರನೇಯವರು ಜಯಪ್ರಕಾಶ್ ನಾರಾಯಣ್. ಸ್ವಾತಂತ್ರ್ಯ ಬಂದ ದಿನವೇ ದೇಶದಲ್ಲಿ ರಕ್ತದ ಹೊಳೆ ಹರಿಯಿತು. ಪ್ರಜೆಗಳ ಆಕ್ರಂದನ ಆಗಸದಲ್ಲಿ ಪ್ರತಿಧ್ವನಿತಗೊಂಡಿತು, ಎಲ್ಲೆಲ್ಲೂ ದ್ವೇಷದ ಹಾಲಾಹಲ ಹರಡಿತು. ಇಂಥ ಘೋರಾಂಧಕಾರದಲ್ಲಿ ಭಾರತ ಇದ್ದಾಗ ಗಾಂಧೀಜಿ ಸತ್ಯ ಅಹಿಂಸೆಯ ಮಂತ್ರಗಳೊಂದಿಗೆ ಆಗಮಿಸಿದರು. ಬರಡಾದ ಭೂಮಿಯಲ್ಲಿ ಮಾನವತೆಯನ್ನು ಬಿತ್ತಿದರು. ಅವರು ಬಿತ್ತಿದ ಬೀಜಗಳು ಇನ್ನೂ ಮೊಳಕೆಯೊಡಬೇಕಿದೆ. ಅವರು ಬಿತ್ತಿದ ಬೀಜಗಳಲ್ಲಿ ಹಿಂದೂ-ಮುಸ್ಲಿಂ ಸೌಹಾರ್ದತೆ, ದಲಿತೋದ್ಧಾರ, ಗ್ರಾಮಜೀವನದ ಪುನರುತ್ಥಾನ, ಜೀವನ ಶಿಕ್ಷಣ, ಸರಳ ಜೀವನ ಇತ್ಯಾದಿಗಳು ಪ್ರಮುಖವಾಗಿವೆ. ಇವುಗಳನ್ನು ಇಂದಿನ ಭಾರತೀಯರು ಬೆಳೆಸಿ, ಪೋಷಿಸಿಕೊಂಡು ಬರಬೇಕಾಗಿದೆ. ಸ್ವಾತಂತ್ರ್ಯ ಬರುವ ಮೊದಲು ಏನೆಲ್ಲ ಸಾಮಾಜಿಕ-ರಾಜಕಿಯ-ಆರ್ಥಿಕ ಸಮಸ್ಸೆಗಳಿದ್ದವೋ ಆ ಎಲ್ಲ ಸಮಸ್ಸೆಗಳು ಇಂದೂ ಪರಿಹಾರ ಕಾಣದೆ ಮುಂದುವರಿದಿವೆ. ಸ್ವಾತಂತ್ರ್ಯ ಆ ಎಲ್ಲ ಸಮಸ್ಯೆಗಳಿಗೆ ಒಂದು ಹರಿತವನ್ನು, ಮೊನಚನ್ನು ತಂದುಕೊಟ್ಟಿದೆ, ಆದ್ದರಿಂದ ಅಸಂತೋಷಕ್ಕೆ ಯಾವುದೇ ಕಾರಣವಿರಲಿ ಅದು ಸಕಾರಣವೇ ಆಗಿರಬಹುದು, ಅಕಾರಣವೇ ಆಗಿರಬಹುದು ಮತ್ತು ಸಣ್ಣ ಕಾರಣವೇ ಆಗಿರಬಹುದು ಅದು ಒಮ್ಮೆಲೆ ಮಹಾನ್ ಜ್ವಾಲೆಯ ರೂಪ ಧಾರಣ ಮಾಡುತ್ತದೆ. ಪ್ರತಿ ವರ್ಷ ಇಂಥ ಘಟನೆಗಳ ಕಾರಣದಿಂದಾಗಿ ಒಂದು ಚಿಕ್ಕ ಯುದ್ಧದಲ್ಲಿ ಸಾಯುವಷ್ಟು ಜನ ಸಾಯುತ್ತಿದ್ದಾರೆ. ಇಂಥ ದಾರುಣ ಪರಿಸ್ಥಿತಿ ಮುಂದುವರಿಯುವುದು ದೇಶದ ನಾಗರಿಕ ಜೀವನದ ಆರೋಗ್ಯಕರ ಬೆಳವಣಿಗೆಗೆ ಪೂರಕವಲ್ಲ. ಎಂಥ ಕಾಲಕ್ಕೂ, ಎಂಥ ಸಮಸ್ಸೆಗೂ ಉತ್ತರ ಕೊಡಬಲ್ಲ ನಾಯಕತ್ವವನ್ನು ಕೊಡಬಹುದಾದ ವ್ಯಕ್ತಿಗಳನ್ನು ಸೃಷ್ಟಿಸುವ ಸಮಾಜ ನಮ್ಮದಾಗಬೇಕಾದರೆ ಇಂದಿನ ಲೋಕ ಮಾನಸ ಬದಲಾಗಬೇಕು. ಈ ಹಂತದಲ್ಲಿ ನಮಗೆ ನೆರವಾಗುವ ವ್ಯಕ್ತಿಗಳು ಗಾಂಧೀ - ಜೇಪಿ-ವಿನೋಬಾ ಮತ್ತು ಅವರು ಸೂಚಿಸಿದ ಗ್ರಾಮ ಸ್ವರಾಜ್ಯ ಮತ್ತು ಪಕ್ಷಾತೀತ ರಾಜಕಾರಣ. ಈ ಪ್ರಯತ್ನದಲ್ಲಿ ಈಗ ಬೃಹದಾಕಾರವಾಗಿ ಬೆಳೆದಿರುವ ಶಿಕ್ಷಣ ಕ್ಷೇತ್ರವು ಮಹತ್ವದ ಪಾತ್ರವನ್ನು ನಿರ್ವಹಿಸಬೇಕು. ಇತ್ತೀಚಿಗಿನ ಅಂಕಿ ಸಂಖ್ಯೆಗಳ ಪ್ರಕಾರ ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ೭೨ ಲಕ್ಷಕ್ಕೂ ಮೀರಿ ಇದೆ. ★

ಎಲ್ಲ ಧರ್ಮಗಳ ಧ್ಯೇಯ: ಸೌಹಾರ್ದತೆ

-ಸುರೇಂದ್ರ ಕೌಲಗಿ

ನಮ್ಮ ದೇಶ ಭಾರತ. ಇದು ಬಹಳ ಪುರಾತನವಾದುದು, ಮತ್ತು ವಿಶಾಲವಾದುದು. ಇಲ್ಲಿ ಅನೇಕ ಧರ್ಮಗಳಿವೆ. ಇಲ್ಲಿಯ ಮುಖ್ಯ ಧರ್ಮ ಹಿಂದೂ ಧರ್ಮ. ಇದು ೩೦,೦೦೦ ವರ್ಷಗಳಿಗಿಂತಲೂ ಹೆಚ್ಚು ಪುರಾತನವಾದುದು. ಈ ಧರ್ಮ ಎಲ್ಲ ಜನರೂ ಸುಖಿಗಳಾಗಿ ಬಾಳಲಿ ಎಂದು ಹಾರೈಸಿದೆ. ಪ್ರಾಣಿಗಳನ್ನು, ಗಿಡಮರಗಳನ್ನು, ಪರ್ವತಗಳನ್ನು, ಮತ್ತು ನದಿಗಳನ್ನು ಕೂಡ ಪ್ರೀತಿಸಬೇಕು ಎಂದು ಹೇಳಿದೆ. ಎಲ್ಲ ಜನರು ಸರಿ ಸಮಾನರು ಎಂದು ತಿಳಿಸಿದೆ. ಪ್ರಪಂಚದ ಎಲ್ಲ ಕಡೆಗೂ, ಎಲ್ಲ ಪದಾರ್ಥಗಳಲ್ಲೂ, ಎಲ್ಲ ಜೀವಿಗಳಲ್ಲೂ ದೇವರು ಇದ್ದಾನೆ ಎಂದು ತಿಳಿಸಿದೆ.

ಭಾರತದ ಇನ್ನೊಂದು ಧರ್ಮ ಇಸ್ಲಾಂ. ಈ ಶಬ್ದದ ಅರ್ಥ ಶಾಂತಿ. ಪ್ರಪಂಚದಲ್ಲಿರುವ ಎಲ್ಲರಿಗೂ ಶಾಂತಿ ಸಿಗಲಿ ಎಂದು ಇಸ್ಲಾಂ ಧರ್ಮ ಹಾರೈಸುತ್ತದೆ. ಪ್ರಾಣಿಗಳ ಜೊತೆಗೆ ವ್ಯವಹರಿಸುವಾಗ ದೇವರ ಭಯ ಇರಲಿ. ಅವು ಗಾಯಗೊಂಡಿದ್ದಾಗ ಕೆಲಸ ಮಾಡಿಸಬೇಡ. ಅವು ದಣಿದಾಗ ವಿಶ್ರಾಂತಿ ಕೊಡು ಎಂದು ಇಸ್ಲಾಂ ಧರ್ಮ ಸಾರಿದೆ.

ಭಾರತದ ಇನ್ನೊಂದು ಮುಖ್ಯ ಧರ್ಮ ಬೌದ್ಧ ಧರ್ಮ, ಬೌದ್ಧ ಧರ್ಮವನ್ನು ಸ್ಥಾಪಿಸಿದ ಭಗವಾನ್ ಬುದ್ಧನು ಬಹಳ ಕರುಣಾಳು. ಜಗತ್ತಿನಲ್ಲಿ ವೈರದಿಂದ ವೈರ ಎಂದಿಗೂ ಅಳಿಯದು. ಗೆಳೆತನ ಮಾಡಿದರೆ ವೈರ ಅಳಿಯುತ್ತದೆ ಎಂದು ಬುದ್ಧ ಹೇಳಿದ. ಪ್ರತಿಯೊಬ್ಬರು ದಾನ ಮಾಡಬೇಕು. ದಾನದಿಂದಲೇ ಮನುಷ್ಯನಿಗೆ ಸುಖ ಸಿಗುವುದು, ಎಂದು ಬುದ್ಧ ಬೋಧಿಸಿದ. ಮನುಷ್ಯ ಯಾರನ್ನೂ ಕೊಲ್ಲಬಾರದು, ಕೊಲ್ಲಿಸಲು ಪ್ರಚೋದಿಸಬಾರದು ಎಂದು ಸಹ ಬುದ್ಧ ಹೇಳಿದ್ದಾನೆ. ಈ ಮಾತುಗಳನ್ನು ಅವನು ಸುಮಾರು ೧೬೦೦ ವರ್ಷಗಳ ಹಿಂದೆ ಹೇಳಿದ.

ಭಾರತದ ಇನ್ನೊಂದು ಧರ್ಮ ಯಹೂದಿ ಧರ್ಮ. ಈ ಭೂಮಿ ಎಲ್ಲವೂ ಈಶ್ವರನದು. ಈ ಭೂಮಿ ಯಾರ ಒಡೆತನಕ್ಕೂ ಸೇರಿಲ್ಲ. ಸತ್ಯ, ನ್ಯಾಯ, ಪ್ರೇಮ, ಕರುಣೆ, ಶ್ರಮ ಸದಾಚಾರಗಳು ಯಹೂದಿ ಧರ್ಮದ ಮೂಲ ತತ್ವಗಳು. ಬೇರೆಯವರ ತಪ್ಪನ್ನು ಎಣಿಸುವವನು ಪ್ರೇಮ ಕಳೆದುಕೊಳ್ಳುತ್ತಾನೆ. ಕೆಟ್ಟ ಮನುಷ್ಯ ದಂಗೆಯ ಯತ್ನ ಮಾಡುತ್ತಾನೆ. ವೈರದಿಂದ ಜಗಳ. ಪ್ರೇಮದಿಂದ ತಪ್ಪು ಮುಚ್ಚಿಹೋಗುತ್ತದೆ. ಕೆಡುಕನ್ನು ದ್ವೇಷಿಸು, ಒಳಿತನ್ನು ಪ್ರೀತಿಸು ಎಂದು ಯಹೂದಿ ಧರ್ಮದ ಯಹುವಾ ಹೇಳಿದ್ದಾನೆ.

ಭಾರತದ ಇನ್ನೊಂದು ದೊಡ್ಡ ಧರ್ಮ. ಸಿಕ್ ಧರ್ಮ. ಗಾಳಿ ನಮ್ಮ ಗುರು. ನೀರು ನಮ್ಮ ತಂದೆ, ಈ ವಿಶಾಲ ಪೃಥ್ವಿಯೇ ನಮ್ಮ ತಾಯಿ. ರಾತ್ರಿ ಮತ್ತು

ಹಗಲು ಇವೇ ನಮ್ಮನ್ನು ಪಾಲಿಸುತ್ತವೆ ಹಾಗೂ ಬೆಳೆಸುತ್ತವೆ. ಇವರ ಮಡಿಲಿನಲ್ಲಿ ಆಟ ಆಡುತ್ತಿದೆ ಈ ಜಗತ್ತು ಎಂದು ಸಿಖ್ ಧರ್ಮದ ಗುರುನಾನಕ್ ಹೇಳಿದ್ದಾರೆ.

ಭಾರತದ ಇನ್ನೊಂದು ಮುಖ್ಯ ಧರ್ಮ ಜೈನ ಧರ್ಮ. ಎಲ್ಲ ಜೀವಿಗಳ ಕ್ಷಮೆ ಬೇಡುತ್ತೇನೆ ನಾನು. ಎಲ್ಲ ಜೀವಿಗಳಿಗೂ ಕ್ಷಮೆ ನೀಡುತ್ತೇನೆ ನಾನು. ಎಲ್ಲ ಜೀವಿಗಳಲ್ಲೂ ನನ್ನದು ಮೈತ್ರಿ ಭಾವ. ಯಾರೊಡನೆಯೂ ವೈರ ಇಲ್ಲವೆಂದು ಜೈನಧರ್ಮದ ಸ್ಥಾಪಕ ಮಹಾವೀರ ಸುಮಾರು ೩,೦೦೦ ವರ್ಷದ ಹಿಂದೆ ಹೇಳಿದ.

ಭಾರತದ ಇನ್ನೊಂದು ಧರ್ಮ ಪಾರಸಿಕ ಧರ್ಮ, ಸೇಡಿನ ಭಾವನೆಯಲ್ಲಿ ಯಾವುದಾದರೂ ಪಾಪ ಕರ್ಮ ಮಾಡಿಯೇ, ಜೋಕೆ, ಎಲ್ಲರನ್ನೂ ಪ್ರೇಮಿಸು. ಎಲ್ಲರನ್ನೂ ಸೇವಿಸು. ಎಲ್ಲ ಒಳ್ಳೆಯ ಕೆಲಸಗಳಲ್ಲಿ ನೆರವಾಗು. ಎಲ್ಲ ಒಳ್ಳೆಯ ಜೀವಿಗಳನ್ನು ರಕ್ಷಿಸಿ. ಎಲ್ಲರ ಮೇಲೂ ಕರುಣೆ ತೋರು ಎಂದು ಪಾರಸಿಕ ಧರ್ಮದ ಸ್ಥಾಪಕನಾದ ಜರಥುಶ್ರ್ರೋ ಹೇಳಿದ್ದಾನೆ. ಭಾರತದಲ್ಲಿರುವ ಇನ್ನೊಂದು ಧರ್ಮ ಕನ್‌ಫ್ಯೂಶಿಯಸ್ ಧರ್ಮ. ಈ ಧರ್ಮವು ಹೆಚ್ಚಾಗಿ ಚೀನಾ ದೇಶದಲ್ಲಿ ಪ್ರಚಲಿತವಾಗಿದೆ. ಈ ಧರ್ಮದ ಮುಖ್ಯ ಬೋಧನೆಗಳು ಈ ರೀತಿ ಇವೆ. ಮಾನವ ಜೀವನದ ಸಫಲತೆ ಶಾಂತಿಯಲ್ಲಿದೆ. ಯುದ್ಧದಲ್ಲಿ ಇಲ್ಲ, ತ್ಯಾಗದಲ್ಲಿ ಇದೆ, ಭೋಗದಲ್ಲಿ ಇಲ್ಲ. ದೇಶದಲ್ಲಿ ವ್ಯವಸ್ಥೆ ಇದ್ದರೆ ಲೋಕದಲ್ಲಿಶಾಂತಿ ಇರುತ್ತದೆ. ಕಾಡಬೇಡಿ, ಜಗಳ ಆಡಬೇಡಿ. ಎಲ್ಲ ರನ್ನೂ ಪ್ರೀತಿಸಿ.

ಭಾರತದಲ್ಲಿರುವ ಇನ್ನೊಂದು ದೊಡ್ಡ ಧರ್ಮ ಇಸಾಯಿ ಧರ್ಮ ಅಥವಾ ಕ್ರಿಶ್ಚಿಯನ್ ಧರ್ಮ. ರೋಗಿ ದುಃಖಿ,ಪೀಡಿತ, ಪಂಗು 'ಇಂಥವರ ಸೇವೆ ಮಾಡು. ಅನಾಥರಿಗೆ, ವಿಧವೆಯರಿಗೆ ಸಹಾಯ ಮಾಡು. ನಿನ್ನಲ್ಲಿ ಎರಡು ಅಂಗಿ ಇದ್ದರೆ ಅದರಲ್ಲಿ ಒಂದನ್ನು ಯಾರು ಬರಿ ಮೈಯಿಂದ ಇದ್ದಾರೋ ಅವನಿಗೆ ಕೊಡು ಎಂಬುದು ಕ್ರಿಶ್ಚಿಯನ್ ಧರ್ಮದ ಸಂದೇಶ.

ಈ ರೀತಿ ಭಾರತದಲ್ಲಿರುವ ಎಲ್ಲ ಧರ್ಮಗಳು ಮನುಷ್ಯನ ಒಳ್ಳೆಯದನ್ನೇ ಹೇಳಿವೆ. ಒಳ್ಳೆಯ ಮಾರ್ಗವನ್ನು ತೋರಿಸಿವೆ. ಈ ಎಲ್ಲ ಧರ್ಮಗಳು ಹೇಳಿರುವ ಮಾತುಗಳನ್ನು ನಾವು ಗಮನಿಸಬೇಕು, ಎಲ್ಲ ಧರ್ಮಗಳ ಗುರಿ ಒಂದೇ ಆಗಿದೆ. ಅದು ಮಾನವ ಕಲ್ಯಾಣ. ಆದ್ದರಿಂದ ಯಾರೇ ಆಗಲಿ ಒಂದು ಧರ್ಮದ ಹೆಸರಿನಲ್ಲಿ ಮತ್ತೊಂದು ಧರ್ಮವನ್ನು ದ್ವೇಷಿಸುವುದು ತಪ್ಪು. ಒಂದು ಧರ್ಮದವರು ಇನ್ನೊಂದು ಧರ್ಮದವರನ್ನು ಕೊಲ್ಲುವುದು ತಪ್ಪು. ಒಂದು ಧರ್ಮದವರು ಇನ್ನೊಂದು ಧರ್ಮದವರ ಮಂದಿರ, ಮಸೀದಿ, ಚರ್ಚ್ ಮುಂತಾದ ಪ್ರಾರ್ಥನಾ ಸ್ಥಳ, ಪೂಜಾ ಸ್ಥಳಗಳನ್ನು ನಾಶ ಮಾಡುವುದು ತಪ್ಪು.

ಈ ಎಲ್ಲ ಧರ್ಮಗಳು ಒಂದೇ ತೋಟದ ವಿವಿಧ ಪ್ರಕಾರದ ಹೂವುಗಳಿದ್ದಂತೆ. ಒಂದೇ ಸಂಗೀತದ ವಿವಿಧ ರಾಗಗಳಿದ್ದಂತೆ. ಆದ್ದರಿಂದ ಕೋಮು ಸೌಹಾರ್ದತೆಯನ್ನು ಕಾಪಾಡಿಕೊಂಡು ಬರುವುದು ಭಾರತೀಯರೆಲ್ಲರ ಕರ್ತವ್ಯ ಮತ್ತು ಧರ್ಮ.

ಹುತಾತ್ಮ ಭಗತ್‌ಸಿಂಗ್
ಮತ್ತು
ಅವರ ಸಾಮಾಜಿಕ-ರಾಜಕೀಯ ಸಿದ್ಧಾಂತ

-ಅಮರಕಾಂತ್

ಮಾರ್ಚ್ ೨೩.೨೦೦೨ ಭಗತ್‌ಸಿಂಗ್ ಹುತಾತ್ಮರಾದ ೭೧ನೇ ವಾರ್ಷಿಕೋತ್ಸವ. ಈ ಸಂದರ್ಭದಲ್ಲಿ ಈ ಲೇಖನವನ್ನು ಪ್ರಕಟಿಸುತ್ತಿದ್ದೇವೆ.

ಯುವಕರು ನಡೆಸುವ ಪ್ರತಿಯೊಂದು ಹೋರಾಟದಲ್ಲಿ ಹುತಾತ್ಮ ಭಗತ್‌ಸಿಂಗ್ ಈಗಲೂ ಸಹ ಉತ್ಸಾಹವನ್ನು ಏಕೆ ತುಂಬುತ್ತಾರೆ ಮತ್ತು ಹುತಾತ್ಮತೆಯ ಸಂಕೇತವಾಗಿ ಬೆಳಕನ್ನು ಏಕೆ ಚೆಲ್ಲುತ್ತಾರೆ? ಅಮೇರಿಕಾದಲ್ಲಿ ಗೊವೇರಾ ಇದ್ದಂತೆ, ಆಫ್ರಿಕಾದಲ್ಲಿ ಪೆಟ್ರಿಸ್‌ಲುಮೊಂಬಾ ಇದ್ದಂತೆ ಭಾರತದಲ್ಲಿ ಭಗತ್‌ಸಿಂಗ್ ಇದ್ದಾರೆ, ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನು ಅರ್ಪಿಸಿದವರಲ್ಲಿ ಭಗತ್‌ಸಿಂಗ್ ಒಬ್ಬರೇ ಆಗಿರಲಿಲ್ಲ. ಅವರು ಹುತಾತ್ಮರಾಗುವ ಮೊದಲೂ ಮತ್ತು ಆನಂತರವೂ ಅನೇಕ ಜನರು ಹುತಾತ್ಮರಾಗಿ ಹೋದರು. ಅವರೆಲ್ಲರೂ ಸಹ ಭಗತ್‌ಸಿಂಗರಷ್ಟೇ ದೊಡ್ಡ ತ್ಯಾಗಿಗಳಾಗಿದ್ದರು ಮತ್ತು ಉದಾತ್ತ ವಿಚಾರಗಳನ್ನು ಹೊಂದಿದ್ದರು, ಅವರೆಲ್ಲ ನಗುನಗುತ್ತಾ ತಮ್ಮ ಪ್ರಾಣವನ್ನು ಅರ್ಪಿಸಿದಾಗ ಅವರ ತ್ಯಾಗ ಬಹಳ ಹಿರಿದಾಗಿಯೇ ಇತ್ತು. ಆದರೆ ಭಗತ್‌ಸಿಂಗ್ ಈ ಎಲ್ಲ ಜೊತೆಗಾರರಿಂದ ಯಾವ ಕಾರಣಕ್ಕಾಗಿ ಭಿನ್ನವಾಗಿದ್ದಾರೆ? ಇದಕ್ಕೆ ಉತ್ತರ :- ಭಗತ್‌ಸಿಂಗ್ ಹೊಂದಿದ್ದ ತತ್ವ ಮತ್ತು ರಾಜಕೀಯ ಸಿದ್ಧಾಂತ. ಈಗಿನ ಯಾವ ಸರ್ಕಾರವು ಭಗತ್‌ಸಿಂಗ್‌ರನ್ನು ಹಾಡಿ ಹೊಗಳಿ ಆಟ್ಟಕ್ಕೆ ಏರಿಸುತ್ತದೋ, ಯಾವುದು ವಿಗ್ರಹಗಳನ್ನೂ, ಸ್ಮಾರಕಗಳನ್ನೂ ನಿರ್ಮಿಸುತ್ತದೋ ಆ ಸರ್ಕಾರವೇ ಭಗತ್‌ಸಿಂಗ್ ಇಟ್ಟುಕೊಂಡಿದ್ದ ವಿಚಾರಗಳಿಂದ ದೂರ ಹೋಗುತ್ತಿದೆ. ಅಲ್ಲದೆ, ಭಗತ್‌ಸಿಂಗ್‌ರಿಗೆ ಅತ್ಯಂತ ಪ್ರಿಯವಾಗಿದ್ದ ವಿಚಾರಕ್ಕಾಗಿ ಹೋರಾಟ ಮಾಡುತ್ತಿರುವ ಯುವಕರನ್ನು ಸರ್ಕಾರ ಹತ್ಯೆ ಮಾಡುತ್ತಿದೆ! ಇಂದು ಎಲ್ಲ ಪ್ರಕಾರದ ಪ್ರತಿಗಾಮಿಗಳೂ, ಮೂಲಭೂತವಾದಿಗಳೂ, ಅಂಧ ಶ್ರದ್ಧಾಳುಗಳೂ ತಮ್ಮ ಸ್ವಂತ ರಾಜಕೀಯ ಉದ್ದೇಶ್ಯಗಳಿಗಾಗಿ ಭಗತ್‌ಸಿಂಗರ ಹೆಸರನ್ನು ಮತ್ತು ಪ್ರಸಿದ್ಧಿಯನ್ನು ತಪ್ಪಾಗಿ ಮತ್ತು ಅಪ್ರಮಾಣಿಕವಾಗಿ ಉಪಯೋಗಿಸುತ್ತಿದ್ದಾರೆ. ಧರ್ಮ, ಸಮಾಜವಾದ ಮತ್ತು ಭಾರತೀಯ ಸಮಾಜ ಕುರಿತು ಹೊಂದಿದ್ದ ಅವರ ವಿಚಾರಗಳನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ ಮತ್ತು ತಮ್ಮ ಉದ್ದೇಶಗಳ ನೆರವೇರಿಕೆಗಾಗಿ ತಿರುಚಲಾಗುತ್ತಿದೆ. ಭಗತ್‌ಸಿಂಗ್ ಮತ್ತು ಅವರ ಜೊತೆಗಾರರನ್ನು ಉನ್ನತ ಸ್ಥಾನದಲ್ಲಿರಿಸಿ ಗೌರವಿಸುತ್ತಾರೆಯೋ ತೊರತು ಅವರ

ವಿಚಾರಗಳನ್ನು ಆಚರಿಸುವುದಿಲ್ಲ. ಈ ರೀತಿ ಉದ್ದೇಶಪೂರ್ವಕವಾಗಿ ಕೀಳು ನೀತಿಯನ್ನು ಅನುಸರಿಸಲಾಗುತ್ತಿದೆ. ಒಮ್ಮೆ ಭಗತ್‌ಸಿಂಗ್ ಹೀಗೆ ಹೇಳಿದರು, "ನೀವು ವ್ಯಕ್ತಿಗಳನ್ನು ಕೊಲ್ಲಬಹುದು. ಆದರೆ ವಿಚಾರಗಳನ್ನು ಕೊಲ್ಲಲಾರಿರಿ. ದೊಡ್ಡ ಸಾಮ್ರಾಜ್ಯಗಳು ಉರುಳಿವೆ. ಆದರೆ ವಿಚಾರಗಳು ಉಳಿದಿವೆ." ಭಗತ್‌ಸಿಂಗ್ ಮಹಾನ್ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರಾಗಿದ್ದರು. ಅವರು ಕ್ರಾಂತಿಕಾರಿಯೂ, ಸಮಾಜವಾದಿಯೂ, ಮತ್ತು ಚಿಂತಕರೂ ಆಗಿದ್ದರೆಂಬ ಅರ್ಥದಲ್ಲಿ ಅವರನ್ನು ಪುನಃ ಸರಿಯಾಗಿ ಅರ್ಥಮಾಡಿಕೊಳ್ಳುವ ಸಮಯ ಇದೀಗ ಬಂದಿದೆ. ಇದು ನಮ್ಮ ಕರ್ತವ್ಯವೂ ಹೌದು. ಅವರು ನ್ಯಾಯಸ್ಥಾನಗಳಲ್ಲಿ ಕೊಟ್ಟ ಹೇಳಿಕೆಗಳು, ಪ್ರಕಟಿಸಿದ ಅನೇಕ ಹಸ್ತ ಪತ್ರಿಕೆಗಳು, ನೌಜವಾನ್ ಭಾರತ್ ಸಭಾ, ಹಿಂದೂಸ್ಥಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಶನ್ (HSRA) ಎಂಬ ಸಂಸ್ಥೆಗಳ ಪ್ರಣಾಳಿಕೆಗಳು, ಅವರ ಜೈಲು ನೋಟ್ ಬುಕ್‌ಗಳು ಮತ್ತು ಇತರ ಲೇಖನಗಳಲ್ಲಿಯ ವಿಚಾರಗಳು ಅವರು ಒಬ್ಬ ಸೈದ್ಧಾಂತಿಕ ವ್ಯಕ್ತಿ ಆಗಿದ್ದರೆಂದು ಸಾರುತ್ತವೆ. ತಮ್ಮ ಸಮಕಾಲಿನ ಮಾರ್ಕ್ಸ್ ವಿಚಾರದೊಂದಿಗೆ ಅವರು ಬಹಳ ಪರಿಚಯ ಹೊಂದಿದ್ದರೆಂಬುದನ್ನೂ ಅವು ತಿಳಿಸುತ್ತವೆ. ಅವರು ತಮ್ಮ ರಾಜಕೀಯ ಜೀವನದ ಬಹಳ ಪ್ರಾರಂಭದಲ್ಲಿಯೇ ಸಮಾಜವಾದ, ಸ್ವಾತಂತ್ರ್ಯ ಮುಂತಾದ ವಿಚಾರಗಳ ಬಗ್ಗೆ ಸ್ಪಷ್ಟ ದೃಷ್ಟಿಕೋನವನ್ನು ಹೊಂದಿದ್ದರು. ಆ ದೃಷ್ಟಿಕೋನವು ಕಾಂಗ್ರೆಸ್ ಮತ್ತು ಅಂದಿನ ಅನೇಕ ಪ್ರಮುಖ ನಾಯಕರ ವಿಚಾರಗಳಿಂದ ಭಿನ್ನವಾಗಿತ್ತು. ಆ ದೃಷ್ಟಿಕೋನವು ಸ್ವಾತಂತ್ರ್ಯವನ್ನು ಹೇಗೆ ಪಡೆಯಬೇಕೆಂಬ ವಿಧಾನಗಳ ಬಗ್ಗೆ ಮಾತ್ರವಲ್ಲ ಸ್ವಾತಂತ್ರ್ಯದ ಕಲ್ಪನೆಯ ಬಗ್ಗೆಯೇ ಅವರ ವಿಚಾರಗಳು ಭಿನ್ನವಾಗಿದ್ದವು. ಕಾಂಗ್ರೆಸ್ ಮತ್ತು ಬ್ರಿಟಿಷ್ ಸಾಮ್ರಾಜ್ಯವಾದಿಗಳ ಮಧ್ಯ ಒಪ್ಪಂದ ಉಂಟಾಗಬಹುದೆಂಬ ಭೀತಿಯನ್ನು ಭಗತ್‌ಸಿಂಗ" ೧೯೨೮ರಲ್ಲಿ ಹೊಂದಿದ್ದರು. ೨೦ನೇ ಶತಮಾನದ ಆಗಮನದೊಂದಿಗೆ ಬ್ರಿಟಿಷ್ ನೌಕರಶಾಹಿ ಭಾರತದ ಬಗ್ಗೆ ಹೊಸ ನೀತಿಯನ್ನೆ ಅನುಸರಿಸಲು ಪ್ರಾರಂಭಿಸಿತು. ಅವರು ನಮ್ಮ ದೇಶದಲ್ಲಿರುವ ಮೇಲ್ವರ್ಗದ ಜನರಿಗೆ ರಿಯಾಯ್ತಿ ತೋರಿಸಿಯೋ ಪದವಿ ಇತ್ಯಾದಿಗಳನ್ನು ಕೊಟ್ಟೋ ಅವರನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳುವ ನೀತಿಯನ್ನು ಅನುಸರಿಸಿತು. ಬ್ರಿಟಿಷರು ಭಾರತದಲ್ಲಿ ಹೆಚ್ಚು ಹೆಚ್ಚು ಬಂಡವಾಳವನ್ನು ತೊಡಗಿಸುತ್ತಾ ಹೋದಂತೆ ದೇಶದ ಮೇಲೆ ಅವರ ಹಿಡಿತ ಪ್ರಬಲಗೊಳ್ಳುತ್ತಾ ಹೋಗುವುದು. ಕಾಂಗ್ರೆಸ್ಸಿನ ಪ್ರಮುಖ ನಾಯಕರು ವಿದೇಶಿ ಆಡಳಿತಗಾರರೊಂದಿಗೆ ತಮ್ಮ ಹಿತವನ್ನು ಜೋಡಿಸಿಕೊಳ್ಳುವುದರಿಂದ ಅವರು ಭಾರತೀಯ ಜನಸಾಮಾನ್ಯರಿಗೆ ನೆರವಾಗುವುದಿಲ್ಲವಷ್ಟೇ ಅಲ್ಲ, ದೇಶಿಯ ವಾಣಿಜ್ಯೋದ್ಯಮಿಗಳ ಮೂಲಕ ಇಂಗ್ಲೀಷ್ ಸರ್ಕಾರದ ಮೇಲೆ ಒತ್ತಡ ತಂದು ಕಾಂಗ್ರೆಸ್ ಅಧಿಕಾರವನ್ನು ಹಿಡಿಯಲು ಪ್ರಯತ್ನಿಸುವುದು.

ಕಾಂಗ್ರೆಸ್ ಈ ಮಾರ್ಗವನ್ನು ಅನುಸರಿಸಿದರೆ ದೇಶದಲ್ಲಿರುವ ಲಕ್ಷಾಂತರ ಕಾರ್ಮಿಕರ ಮತ್ತು ರೈತರ ನಿಜವಾದ ಮುಕ್ತಿ ಸಾಧ್ಯವಾಗುವುದಿಲ್ಲ. ರೈತರು, ಕಾರ್ಮಿಕರು ವಿದೇಶಿ ಆಡಳಿತದ ನೊಗದಿಂದ ಮಾತ್ರವಷ್ಟೇ ಅಲ್ಲ, ದೇಶದಲ್ಲಿರುವ ಭೂಮಾಲೀಕರ ನೊಗದಿಂದಲೂ ಬಿಡುಗಡೆ ಹೊಂದಬೇಕಾಗಿದೆ. ಆದರೆ ಇದು ಕಾಂಗ್ರೆಸ್ಸಿನ ಗುರಿಯಾಗಿರುವುದಿಲ್ಲ. ಎಲ್ಲ ಶೋಷಿತರ ಬಿಡುಗಡೆಯ ಗುರಿಯನ್ನು ಕಾಂಗ್ರೆಸ್ ಇಟ್ಟುಕೊಂಡಿರುವಂತೆ ಕಾಣುವುದಿಲ್ಲ. ಸರ್ಕಾರದ ಮೇಲೆ ಒತ್ತಡವನ್ನು ತರುವುದರ ಮೂಲಕ ಭಾರತದಲ್ಲಿಯ ಶ್ರೀಮಂತ ವರ್ಗಕ್ಕೆ ರಿಯಾಯಿತಿಯನ್ನು ಪಡೆಯುವುದೇ ಕಾಂಗ್ರೆಸ್ಸಿನ ಉದ್ದೇಶವಾಗಿದೆ. ಆದರೆ ಭಗತ್‌ಸಿಂಗರ ಹಿಂದೂಸ್ಥಾನ ಸೋಷಿಯಾಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್ (HSRA) ಸ್ಪಷ್ಟವಾದ ಕಾರ್ಯಕ್ರಮವನ್ನು ಹೊಂದಿತ್ತು ಮತ್ತು ಅದರ ಸದಸ್ಯರು ಯಾವ ಕೆಲಸವನ್ನು ಮಾಡಬೇಕೆಂದು ಸಹ ಸ್ಪಷ್ಟವಾಗಿ ತಿಳಿಸಿತ್ತು. ಭಗತ್‌ಸಿಂಗರ ಪ್ರಕಾರ ಕ್ರಾಂತಿಯೆಂದರೆ ಬಾಂಬ್ ಅಥವಾ ಪಿಸ್ತೂಲಿನ ಆರಾಧನೆಯಲ್ಲ, ಅವರ ಅರ್ಥದಲ್ಲಿ ಕ್ರಾಂತಿಯೆಂದರೆ ಅನ್ಯಾಯದ ಮೇಲೆ ನಿಂತಿರುವ ಇಂದಿನ ಸಮಾಜ ವ್ಯವಸ್ಥೆಯನ್ನು ಪರಿವರ್ತಿಸುವುದೇ ಆಗಿದೆ. ಅಲ್ಲದೆ, ರೈತರ ಸರ್ವಾಧಿಕಾರವನ್ನು ಮಾನ್ಯಮಾಡುವ ಸಮಾಜದ ಸ್ಥಾಪನೆ ಸಹ ಆ ಕ್ರಾಂತಿಯ ಉದ್ದೇಶವಾಗಿದೆ. ಆದ್ದರಿಂದ ಇಂದಿನ ವ್ಯವಸ್ಥೆ ಮತ್ತು ಪದ್ಧತಿಯನ್ನು ಆಮೂಲಾಗ್ರ ತೆಗೆದು ಹಾಕಬೇಕಾಗಿದೆ. ಈ ಉದ್ದೇಶಕ್ಕಾಗಿ ನಾವು ರಾಜ್ಯಾಧಿಕಾರವನ್ನು ಹಿಡಿಯಬೇಕಾಗಿದೆಯೆಂದು ಭಗತ್ ಹೇಳಿದರು.

ಭಗತ್‌ಸಿಂಗ್ ಓರ್ವ ಭಯೋತ್ಪಾದಕರಾಗಿದ್ದರೆಂದು ಯಾವಾಗಲೂ ಅವರನ್ನು ದೂಷಿಸಲಾಗುತ್ತದೆ. **'ಬಾಂಬ್ ಆರಾಧನೆ'** ಎಂಬ ಶೀರ್ಷಿಕೆಯ ತಮ್ಮ ಲೇಖನದಲ್ಲಿ ಗಾಂಧೀಜಿ HSRA ಒಂದು ಭಯೋತ್ಪಾದಕ ಸಂಸ್ಥೆಯೆಂದು ಆಪಾದಿಸಿದ್ದರು. ಈ ಲೇಖನಕ್ಕೆ ಉತ್ತರ ರೂಪದಲ್ಲಿ ಭಗತ್‌ಸಿಂಗ್ **"ಬಾಂಬಿನ ಸಿದ್ಧಾಂತ"** ಎಂಬ ಲೇಖನದಲ್ಲಿ ಹೀಗೆ ಬರೆದಿದ್ದಾರೆ:

"ಭಯೋತ್ಪಾದನೆ ಎಂಬುದು ಯಾವುದೇ ಕ್ರಾಂತಿಯಲ್ಲಿ ಇರತಕ್ಕ ಅಗತ್ಯವೂ, ಅನಿವಾರ್ಯವೂ ಆದ ಅಂಶ. ಆದರೆ ಭಯೋತ್ಪಾದನೆಯೇ ಸಂಪೂರ್ಣ ಕ್ರಾಂತಿ ಅಲ್ಲವಾದರೂ ಭಯೋತ್ಪಾದನೆ ಇಲ್ಲದೆ ಕ್ರಾಂತಿ ಪೂರ್ಣವಾಗುವುದಿಲ್ಲ. ರಾಜ್ಯಭಾರ ನಿರ್ವಹಿಸುತ್ತಿರುವ ಆಡಳಿತ ವರ್ಗದ ಶ್ರೇಷ್ಠತೆಯ ಮೂಲವನ್ನು ಅದು ಅಲ್ಲಾಡಿಸುತ್ತದೆಯಲ್ಲದೆ ತುಳಿತಕ್ಕೆ ಒಳಗಾದವರ ಗೌರವವನ್ನು ಹೆಚ್ಚಿಸುತ್ತದೆ. ಏಕೆಂದರೆ ಒಂದು ದೇಶಹೊಂದಬೇಕಾದ ಸ್ವಾತಂತ್ರ್ಯದ ಹಸಿವಿನ ಸಾಕ್ಷಿಯಾಗಿ ಶೋಷಿತ ಜನರಿದ್ದಾರೆ. ಅವರ ಹಸಿವು ಕ್ರಾಂತಿಯಲ್ಲಿ ರೂಪಾಂತರಗೊಳ್ಳುತ್ತದೆ ಮತ್ತು ನಂತರ ಆ ಕ್ರಾಂತಿಯು ಸ್ವಾತಂತ್ರ್ಯದಲ್ಲಿ ರೂಪಗೊಳ್ಳುತ್ತದೆ. ಆ ಸ್ವಾತಂತ್ರ್ಯವು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ್ದಾಗಿರುತ್ತದೆ". ಇನ್ನು

ಗಾಂಧೀಜಿಯವರಿಗೆ ಅತ್ಯಂತ ಪ್ರಿಯವಾಗಿದ್ದ ಅಹಿಂಸೆ ಕುರಿತಾದ ಭಗತ್ ಸಿಂಗ್‌ರ ಅರ್ಥ ಗಮನೀಯವಾಗಿದೆ:-

"ಅಹಿಂಸೆಯೆಂಬ ಹೆಸರಿನಲ್ಲಿ ಯಾವುದನ್ನು ಎಲ್ಲರೂ ಸಾಮಾನ್ಯವಾಗಿ ತಿಳಿಯುತ್ತಾರೋ ಅದು ನಿಜವಾಗಿಯೂ ಆತ್ಮಶಕ್ತಿಯೆ ಆಗಿರುತ್ತದೆ. ಆತ್ಮಶಕ್ತಿಯನ್ನು ವ್ಯಯಕ್ತಿಕ ಮತ್ತು ರಾಷ್ಟ್ರೀಯ ಹಕ್ಕುಗಳನ್ನು ಪಡೆಯಲು ಆತ್ಮಕ್ಷೋಭೆಯ ಮೂಲಕ ಪ್ರಯತ್ನಿಸುವುದೇ ಅಹಿಂಸಾ ಕ್ರಿಯೆ. ಯಾವುದೇ ಒಂದು ವಿಷಯ ನ್ಯಾಯಯುತವಾಗಿದೆಯೆಂದು ತಿಳಿದಾದ ಮೇಲೆ ಅದನ್ನು ಕ್ರಾಂತಿಕಾರಿ ಹಕ್ಕಾಗಿ ಕೇಳುತ್ತಾನೆ, ಬೇಡುತ್ತಾನೆ ಮತ್ತು ಅದಕ್ಕಾಗಿ ವಾದಮಾಡುತ್ತಾನೆ ಮತ್ತು ತನ್ನಲ್ಲಿರುವ ಎಲ್ಲ ಶಕ್ತಿಯನ್ನು ಉಪಯೋಗಿಸಿ ಅದನ್ನು ಪಡೆಯಲು ನಿಶ್ಚಯಿಸುತ್ತಾನೆ. ಅದಕ್ಕಾಗಿ ಅತ್ಯಂತ ಗರಿಷ್ಠ ಪ್ರಮಾಣದ ನೋವನ್ನೂ. ಅನುಭವಿಸಲು ಸಿದ್ಧನಾಗಿರುತ್ತಾನೆ ತ್ಯಾಗವನ್ನು ಮಾಡಲು ಸಿದ್ಧನಾಗಿರುತ್ತಾನೆ ಅದರೊಂದಿಗೆ ತನಗೆ ಸಾಧ್ಯವಿರುವಷ್ಟು ದೈಹಿಕ ಶಕ್ತಿಯನ್ನು ಜೊತೆಗೂಡಿಸುತ್ತಾನೆ. ಹೀಗೆ ಅವನು ಆತ್ಮಶಕ್ತಿಯೊಂದಿಗೆ ದೈಹಿಕಶಕ್ತಿಯನ್ನೂ ಸೇರಿಸುತ್ತಾನೆ. ಯಾವುದೇ ಒಂದು ಶಕ್ತಿಯನ್ನು ಆಕ್ರಮಣಕಾರಿ ರೀತಿಯಲ್ಲಿ ಉಪಯೋಗಿಸಿದಾಗ ಅದು ಹಿಂಸೆಯಾಗುತ್ತದೆ. ಆದ್ದರಿಂದ ಅದು ನೈತಿಕವಾಗಿ ಸಮರ್ಥನೀಯವಲ್ಲ. ಆದರೆ, ಒಂದು ನ್ಯಾಯಯುತವಾದ ಉದ್ದೇಶಕ್ಕಾಗಿ ಅದನ್ನು ಉಪಯೋಗಿಸಿದಲ್ಲಿ ಅದಕ್ಕೆ ನೈತಿಕ ಸಮರ್ಥನೆ ಇರುತ್ತದೆ. ಹಿಂಸೆಯನ್ನು ಸಾರಾಸಗಟಾಗಿ ನಿರಾಕರಿಸುವುದು ಕಲ್ಪನಾಲೋಕದ ವಿಷಯವಾಗುತ್ತದೆ. ದೇಶದಲ್ಲಿ ಈಗ ಪ್ರಾರಂಭವಾಗಿರುವ ಈ ಹೊಸ ಚಳುವಳಿಗೆ ಗುರು ಗೋವಿಂದ ಸಿಂಗ್, ಶಿವಾಜಿ, ಕೆಮಲ್‌ಪಾಷಾ, ವಾಷಿಂಗ್‌ಟನ್ ಗರಿಬಾಲ್ಡಿ, ಲಫಯಟ್ಟೇ, ಲೆನಿನ್ ಈ ಮುಂತಾದವರ ಹೋರಾಟಕ್ಕೆ ಇದ್ದ ಪ್ರೇರಣೆಗಳೇ ಈ ನಮ್ಮ ಹೊಸ ಚಳುವಳಿಗೂ ಇವೆ."

HSRA ಸದಸ್ಯರು ಕೈಗೊಳ್ಳುತ್ತಿದ್ದ ಪ್ರತಿಯೊಂದು ಕಾರ್ಯದ ಹಿಂದೆ ದೃಢ ತಾತ್ವಿಕ ಸಿದ್ಧಾಂತವಿತ್ತು, ಆ ಸಂಸ್ಥೆಯ ಸದಸ್ಯರು ಜೀವಂತವಾಗಿದ್ದಾಗ ಬ್ರಿಟಿಷ್ ಬಂಡವಾಳಶಾಹಿಗಳು ಮತ್ತು ಅವರ ಸ್ಥಳೀಯದಾಸರು ಬಂಧಿಸಿ ಅವರಿಗೆ ಕಿರುಕುಳಕೊಡುತ್ತಿದ್ದರೂ ಸಹ ಅವರು ತಮ್ಮ ಉದ್ದೇಶದ ಬಗ್ಗೆ ಅಚಲರಾಗಿದ್ದರು. ಆ ಸಂಬಂಧವಾಗಿ ನ್ಯಾಯಸ್ಥಾನದಲ್ಲಿ ಭಗತ್‌ಸಿಂಗ್ ಈ ರೀತಿ ಘೋಷಣೆಮಾಡಿದರು:-

"ಸೋಗಿನ ಸಮಾಜವಾದಿಗಳು ನಮ್ಮನ್ನು ಬಣ್ಣಿಸುವ ರೀತಿಯಲ್ಲಿ ನಾವು ಅಮಾನುಷ ದಾಳಿಕೋರರಲ್ಲ ಮತ್ತು ದೇಶಕ್ಕೆ ಕಳಂಕ ಪ್ರಾಯರೂ ಅಲ್ಲ. ಪ್ರಚಾರ ಮಾಧ್ಯಮದ ಕೆಲವರು ಹೇಳುವಂತೆ ನಾವು ಹುಚ್ಚರಲ್ಲ. ನಾವು ಗಂಭೀರ ಮನೋಭಾವದ ಇತಿಹಾಸದ ವಿದ್ಯಾರ್ಥಿಗಳಾಗಿದ್ದೇವೆಂದು ಮಾತ್ರ

ಹೇಳಲು ಬಯಸುತ್ತೇವೆ. ನಾವು ಅಶಾಘಭೂತತನವನ್ನು ತುಚ್ಛವಾಗಿ ಕಾಣುತ್ತೇವೆ. ನಮ್ಮ ಪ್ರತ್ಯಕ್ಷ ಕಾರ್ಯಚರಣೆ ಕೇಂದ್ರ ಶಾಸನ ಸಭೆಯ ವಿರುದ್ಧವಿದೆ. ಏಕೆಂದರೆ ಆ ಸಭೆಯು ಜನ್ಮ ತಾಳಿದಾಗಿನಿಂದಲೂ ತನ್ನ ನಿರುಪಯೋಗತನವನ್ನು ಸ್ಪಷ್ಟವಾಗಿ ಸಿದ್ಧಪಡಿಸಿದೆ. ಆದಾಗ್ಯೂ ಅದು ವ್ಯಾಪಕವಾದ ಕಿತಾಪತಿಯನ್ನು ಮಾಡುವ ಅಧಿಕಾರವನ್ನು ಹೊಂದಿದೆ. ನಾವು ಆಲೋಚನೆ ಮಾಡಿದಷ್ಟೂ ಕೇಂದ್ರಿಯ ಶಾಸನ ಸಭೆ ಭಾರತೀಯರಿಗೆ ಆಗಿರುವ ಅವಮಾನವನ್ನು ಮತ್ತು ಅವರ ನಿಸ್ಸಹಾಯಕತೆಯನ್ನು ಮತ್ತು ಬೇಜವಾಬ್ದಾರಿ ಸರ್ವಾಧಿಕಾರಿ ಆಡಳಿತವನ್ನು ಪ್ರಪಂಚಕ್ಕೆ ತೋರಿಸುವುದಕ್ಕಾಗಿಯೇ ಇದೆಯೆಂದು ನಮಗೆ ಮನವರಿಕೆಯಾಗಿದೆ"

ಕಾರ್ಮಿಕರು ಮತ್ತು ರೈತರು ಸಂಘಟಿತರಾಗಬೇಕೆಂದು ಕರೆಯನ್ನು ಕೊಡುತ್ತಾ ನೌಜವಾನ್ ಭಾರತ್ ಸಭಾದ ಪ್ರಣಾಳಿಕೆಯಲ್ಲಿ ಈ ರೀತಿ ತಿಳಿಸಲಾಗಿತ್ತು:-

"ಜನರಿಂದ ಮತ್ತು ಜನರಿಗಾಗಿ ಕ್ರಾಂತಿ ಎಂಬ ಧ್ಯೇಯದಿಂದ ದೇಶದ ಜಾಗೃತಿ ಮೂಡಿಸುವ ನಮ್ಮ ಮುಂದಿನ ಕಾರ್ಯಕ್ರಮ ಪ್ರಾರಂಭವಾಗುವುದು.

ಜನರೇ ಸ್ವರಾಜ್ಯವನ್ನು ಪಡೆಯಬೇಕು ಮತ್ತು ತಮಗಾಗಿಯೇ ಪಡೆಯಬೇಕು. ಇದು ಕ್ರಾಂತಿಯು ವಿಶ್ವ ನಿಯಮವೆ ಆಗಿದೆ. ಅದು ಮಾನವನ ಪ್ರಗತಿಯ ರಹಸ್ಯ ಕೂಡ ಆದರೆ ಕ್ರಾಂತಿಯಲ್ಲಿ ರಕ್ತಪಾತವಿರಲೇಬೇಕೆಂದೇನಿಲ್ಲ. ಅಥವಾ ವ್ಯಕ್ತಿಗತ ದ್ವೇಷವಿರಬೇಕಾಗಿಯೂ ಇಲ್ಲ. ಅದು ಬಾಂಬ್ ಮತ್ತು ಪಿಸ್ತೂಲಿನ ಆರಾಧನೆಯೂ ಅಲ್ಲ. ನಾವು ಮಾನವನ ಜೀವನವನ್ನು ಮಾತಿನಲ್ಲಿ ಬಣ್ಣಿಸಲಾಗದಷ್ಟು ಪವಿತ್ರವೆಂದು ಭಾವಿಸಿದ್ದೇವೆ. ಬೇರೆಯವರನ್ನು ಗಾಸಿಗೊಳಿಸುವ ಕೆಲಸಕ್ಕಿಂತ ಮಾನವ ಸೇವೆಗಾಗಿ ನಮ್ಮ ಪ್ರಾಣವನ್ನು ಇಷ್ಟರಲ್ಲಿಯೇ ಸಮರ್ಪಿಸುವಂಥವರಾಗಿದ್ದೇವೆ. ಕ್ರಾಂತಿಯೆಂದು ನಾವು ಹೇಳುವುದರ ಅರ್ಥ ಇಂದಿನ ಸಾಮಾಜಿಕ ವ್ಯವಸ್ಥೆಯನ್ನು ಮೂಲೋತ್ಪಾಟನೆ ಮಾಡುವುದೇ ಆಗಿದೆ. ಈ ಉದ್ದೇಶಕ್ಕಾಗಿ ರಾಜ್ಯಾಧಿಕಾರವನ್ನು ಹಿಡಿಯುವುದು. ಅಗತ್ಯ. ರಾಜ್ಯಾಧಿಕಾರವು ಇಂದು ಸಮಾಜದಲ್ಲಿ ಯಾರು ಅನುಕೂಲಸ್ಥರಾಗಿದ್ದಾರೋ ಅಂಥವರ ಕೈಯಲ್ಲಿದೆ. ಕಾರ್ಲ್‌ಮಾರ್ಕ್ಸ್ ಸಿದ್ಧಾಂತದ ಪ್ರಕಾರ ನಮ್ಮ ಉದ್ದೇಶಗಳನ್ನು ಜಾರಿಗೊಳಿಸುವುದಕ್ಕಾಗಿ ರಾಜ್ಯಾಧಿಕಾರವನ್ನು ಹಿಡಿಯಬೇಕೆಂಬುದು ನಮ್ಮ ಗುರಿಯಾಗಿದೆ."

ಬೇರೆ ಕ್ರಾಂತಿಕಾರರಂತೆಯೆ ಭಗತ್‌ಸಿಂಗ್ ನಾಸ್ತಿಕರಾಗಿದ್ದರು. ತಮ್ಮ ಮರಣದ ಕೆಲವು ದಿನಗಳ ಮೊದಲು "ನಾನೇಕೆ ನಾಸ್ತಿಕ?" ಎಂಬ ಲೇಖನವನ್ನು ಕಾರಾಗೃಹದಲ್ಲಿ ಬರೆದರು. ಆ ಲೇಖನದಲ್ಲಿ ಆ

ವಿಷಯ ಕುರಿತು ಈ ರೀತಿ ಹೇಳುತ್ತಾರೆ:- "ದೇವರಲ್ಲಿಯ ನಂಬಿಕೆ ಕಷ್ಟಗಳನ್ನು ಮೃದು ಮಾಡುತ್ತವೆ. ಅಷ್ಟೇ ಅಲ್ಲ ಕೆಲವೊಮ್ಮೆ ಸಂತೋಷದಾಯಕವನ್ನಾಗಿಯೂ ಮಾಡಬಹುದು. ಮನುಷ್ಯನಿಗೆ ದೇವರಲ್ಲಿಯ ನಂಬಿಕೆ ಸಮಾಧಾನ ಮತ್ತು ನೆಮ್ಮದಿಯನ್ನು ತರಬಹುದು. ಆದರೆ ದೇವರಲ್ಲಿ ನಂಬಿಕೆಯೇ ಇಲ್ಲದಿದ್ದಾಗ ಮನುಷ್ಯ ತನ್ನನ್ನೇ ಅವಲಂಬಿಸಬೇಕಾಗುತ್ತದೆ. ಕಷ್ಟಗಳ ಬಿರುಗಾಳಿ - ಸುಂಟರಗಾಳಿಗಳಲ್ಲಿಯೂ ಮನುಷ್ಯ ತನ್ನ ಕಾಲು ಮೇಲೆ ನಿಂತುಕೊಳ್ಳ ಬೇಕಾಗುತ್ತದೆ. ಇದು ಮಕ್ಕಳಾಟವಲ್ಲ. ಅಂಥ ಪರೀಕ್ಷಾಗಳಿಗೆಗಳಲ್ಲಿ ಅವನಿಗೆ ಆತ್ಮವಿಶ್ವಾಸ ಬೇಕಾಗುತ್ತದೆ ಅದು ಹೊರಟು ಹೋದರೆ ಆಗ ಮನುಷ್ಯನು ಸಾರ್ವತ್ರಿಕವಾಗಿರುವ ನಂಬಿಕೆಗಳನ್ನು ಉಲ್ಲಂಘಿಸಲಾರ. ಒಂದು ವೇಳೆ ಅವನು ನಂಬಿಕೆಗಳನ್ನು ಉಲಂಘಿಸಿದಲ್ಲಿ ಆಗ ಅವನು ಕೇವಲ ಆತ್ಮವಿಶ್ವಾಸವನ್ನಲ್ಲದೆ ಬೇರೆ ಇನ್ನ್ಯಾವುದೋ ಶಕ್ತಿಯನ್ನು ಹೊಂದಿದ್ದಾನೆಂದು ತೀರ್ಮಾನಿಸಬಹುದು. ಯಾವಾಗ ಮನುಷ್ಯ ತನ್ನ ಕಾಲುಗಳ ಮೇಲೆ ತಾನು ನಿಲ್ಲುತ್ತಾನೋ ಮತ್ತು ವಾಸ್ತವವಾದಿಯಾಗುತಾನೋ ಆಗ ಅವನಿಗೆ ದೇವರ ಮೇಲಿನ ನಂಬಿಕೆಎಂಬ ಕೃತಕವಾದ ಊರುಗೋಲು ಬೇಕಾಗುವುದಿಲ್ಲ ಮತ್ತು ದೇವರು ರಕ್ಷಕನೆಂಬ ಕಲ್ಪನೆ ನಿರಾಕರಣಗೊಳ್ಳುತ್ತದೆ. ಪ್ರಗತಿಗಾಗಿ ಹಂಬಲಿಸುವ ಮನುಷ್ಯ ಹಳೆಯ ನಂಬಿಕೆಯ ಪ್ರತಿಯೊಂದು ಅಂಶವನ್ನೂ ಟೀಕಿಸಬೇಕಾಗುತ್ತದೆ. ಅದರ ಮೇಲಿನ ವಿಶ್ವಾಸವನ್ನು ತೆಗೆದುಹಾಕಬೇಕಾಗುತ್ತದೆ. ಹಳೆ ನಂಬಿಕೆಯ ಇಡೀ ಕಟ್ಟಡವನ್ನೇ ಅವನು ಬೀಳಿಸಬೇಕಾಗುತ್ತದೆ. ಬದಲಿಗೆ ಹೊಸ ಸಿದ್ಧಾಂತದ ಕಟ್ಟಡದ ನಿರ್ಮಾಣಕ್ಕಾಗಿ ಸ್ಥಳವನ್ನು ಶುಚಿಗೊಳಿಸಬೇಕಾಗುತ್ತದೆ. ಸ್ವತಂತ್ರವಾದ ವಿಚಾರ ಶಕ್ತಿ ಮತ್ತು ವಿಮರ್ಶಾತ್ಮಕ ಮನೋಭಾವ ಇವೆರಡೂ ಓರ್ವಕ್ರಾಂತಿಕಾರಿಯ ಅವಿಭಾಜ್ಯ ಗುಣಧರ್ಮಗಳು"

ಸ್ವಾತಂತ್ರ್ಯಾನಂತರದ ನಮ್ಮ ದೇಶದ ಆರ್ಥಿಕ - ರಾಜಕೀಯ ಬೆಳವಣಿಗೆಗಳ ಕಡೆಗೆ ನೋಡಿದರೆ ಭಗತಸಿಂಗ್‌ರ ವಿಚಾರಗಳು ಸರಿಯೆಂಬುದಾಗಿ ಸಿದ್ಧಗೊಳ್ಳುತ್ತವೆ. ಭಗತ್‌ಸಿಂಗರು ಮುಂಗಾಣಿದಂತೆ ನಮ್ಮ ಸ್ವಾತಂತ್ರ್ಯವು ದೇಶದ ಶ್ರೀಮಂತ ವರ್ಗದ ರಾಜಕೀಯ ಪ್ರತಿನಿಧಿಗಳ ಹಾಗೂ ಬ್ರಿಟಿಷ್ ಸರ್ಕಾರದ ಮಧ್ಯ ಒಪ್ಪಂದದ ಕಾರಣದಿಂದಾಗಿ ಪಡೆದುದಾಗಿದೆ. ಬ್ರಿಟಿಷರು ಬಿಟ್ಟು ಹೋಗಿದ್ದ ಆಡಳಿತ ವೈಖರಿಯನ್ನೇ ಸ್ವಾತಂತ್ರ್ಯನಂತರವೂ ಉಳಿಸಿಕೊಂಡು ಬಂದೆವು. ಬ್ರಿಟಿಷರ ಆಡಳಿತ ಪದ್ಧತಿಯನ್ನು ಎಷ್ಟರಮಟ್ಟಿಗೆ ಉಳಿಸಿಕೊಂಡು ಬಂದೆವೆಂದರೆ ಬ್ರಿಟಿಷಗವರ್ನರ್ ಜರ್ನಲ್ ಆಗಿದ್ದ ಲಾರ್ಡ್ ಮೌಂಟ್ ಬ್ಯಾಟನ್ನ್‌ರೇ ಸ್ವತಂತ್ರ ಭಾರತ ಸರ್ಕಾರದ ಮುಖ್ಯಸ್ಥರಾಗಿ ಮುಂದುವರಿಯುವಂತೆ ನಮ್ಮ ದೇಶದ ನಾಯಕತ್ವ ವಿನಂತಿಸಿಕೊಂಡಿತು. ನಾವು ಆಲೋಚಿಸ

ಬೇಕಾದ ಮೂಲಭೂತ ಪ್ರಶ್ನೆಯೇನೆಂದರೆ : ಈಗ ನಮ್ಮ ದೇಶದಲ್ಲಾಗುತ್ತಿರುವ ಆರ್ಥಿಕ ಅಭಿವೃದ್ಧಿಯ ಉದ್ದೇಶ ಮತ್ತು ಗುರಿಯೇನು? ಈ ಖಾಸಗೀಕರಣ ಮತ್ತು ವಿಶ್ವೀಕರಣ ಯಾವ ಉದ್ದೇಶಕ್ಕಾಗಿ? ಇದು ಬಡತನ ನಿರ್ಮೂಲನೆ ಮತ್ತು ಉದ್ಯೋಗ ಸೃಷ್ಟಿ ಮತ್ತು ಜನಸಾಮಾನ್ಯರಿಗೆ ಉತ್ತಮ ಹಾಗೂ ಆರೋಗ್ಯ ಸೇವೆಯನ್ನು ಒದಗಿಸುವ ಗುರಿಯನ್ನು ಹೊಂದಿದೆಯೇ? ಖಾಸಗೀಕರಣ ಮತ್ತು ವಿಶ್ವೀಕರಣ ಕೇವಲ ಶ್ರೀಮಂತರತ್ತ ಮತ್ತು ಬಲಾಢ್ಯರತ್ತ ಧಾವಿಸುತ್ತಿಲ್ಲವೇ? ದೇಶದ ಜನಸಂಖ್ಯೆಯ ಶೇಕಡ ೮೦ ರಷ್ಟಿರುವ ಬಡವರ ಹಿತವನ್ನು ಬಲಿಗೊಟ್ಟು ಭಾರತೀಯ ಶ್ರೀಮಂತವರ್ಗ ಅಮೇರಿಕಾ, ಯುರೋಪ್, ಜಪಾನ್ ಮುಂತಾದ ದೇಶಗಳ ಬಹುರಾಷ್ಟ್ರೀಯ ಕಂಪನಿಗಳನ್ನು ಮತ್ತು ಹಣಕಾಸು ಸಂಸ್ಥೆಗಳನ್ನು ಓಲೈಸುತ್ತಿದೆ. ಸಂಯುಕ್ತ ರಾಷ್ಟ್ರ ಸಂಘವು ಪ್ರಕಟಿಸಿರುವ 'ಮಾನವ ಅಭಿವೃದ್ಧಿ ವರದಿ' ೨೦೦೧ರ ಪ್ರಕಾರ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ಮಾಲ್ಡೀವ್ಸ್ ಮುಂತಾದ ದೇಶಗಳ ಶೇಕಡ ೪೦ ರಷ್ಟು ಜನರು ವಿಶ್ವೀಕರಣದ ಪ್ರಭಾವದಲ್ಲಿ ಹೆಚ್ಚು ಬಡವರಾಗಿದ್ದಾರೆ. ಬಡವ ಬಲ್ಲಿದ ಮತ್ತು ನಗರ ಗ್ರಾಮಗಳ ಮಧ್ಯದ ಅಂತರ ಹೆಚ್ಚಾಗಿದೆ. ಸಮಾಜವಾದದ ಆಧಾರದ ಮೇಲೆ ಪೂರ್ಣರೂಪದಲ್ಲಿ ಸಮಾಜವನ್ನು ಪುನರ್‌ಚಿಸಿದರೆ ಮಾತ್ರ, ಮತ್ತು ಸಾಮಾಜಿಕ ಆರ್ಥಿಕ ಶೋಷಕರನ್ನು ನಿರ್ಮೂಲನ ಗೊಳಿಸಿದರೆ ಮಾತ್ರ, ಈ ಸಮಸ್ಯೆಯಿಂದ ಬಿಡುಗಡೆ ಹೊಂದಬಹುದು. ಈ ರೀತಿ ಮಾಡದೆ ಇರುವವರೆಗೆ ಮನುಷ್ಯನಿಂದ ಮನುಷ್ಯನ ಶೋಷಣೆ, ರಾಷ್ಟ್ರಗಳ ನಡುವಿನ ಶೋಷಣೆ ನಿಲ್ಲಲಾರದು. ಅಲ್ಲದೆ, ಮಾನವ ಕುಲವು ಇಂದು ಅನುಭವಿಸುತ್ತಿರುವ ರಕ್ತಪಾತ, ಸಾವುನೋವು, ಯುದ್ಧಗಳ ನಿರ್ಮೂಲನೆ ಹಾಗು ಜಾಗತಿಕ ಶಾಂತಿ ಸ್ಥಾಪನೆ ಇತ್ಯಾದಿಗಳೆಲ್ಲವೂ ಬಹಿರಂಗ ಆಶಾಢಭೂತತನವಾಗಿವೆ.

ಭಗತ್‌ಸಿಂಗ್ ಚಿಕಿತ್ಸಕ ಮನೋಭಾವ ಹೊಂದಿದ್ದರು. ಭಾರತದ ಲೆನಿನ್ ಎಂದು ರೂಪುಗೊಳ್ಳುವ ಎಲ್ಲ ಸುಪ್ತ ಚೇತನಗಳು ಅವರಲ್ಲಿದ್ದವು. ಅವರು ೨೩ ರಂಥ ಚಿಕ್ಕವಯಸ್ಸಿನಲ್ಲಿ ತೀರಿಕೊಂಡರು. ಇದೇ ವಯಸ್ಸಿನ ಬೇರೆ ಯುವಕರು ನಮ್ಮ ಸಮಾಜದಲ್ಲಿರುವ ಕಷ್ಟ ಕಾರ್ಪಣ್ಯ ಮತ್ತು ಶೋಷಣೆಯ ಬಗ್ಗೆ ಅಗಾಧವಾದ ಅಜ್ಞಾನವನ್ನು ಹೊಂದಿರುತ್ತಾರೆ. ಭಗತ್‌ಸಿಂಗರು ಹುತಾತ್ಮರಾದ ೭೧ನೇ ವರ್ಷದಲ್ಲಿ ಮತ್ತು ದೇಶವು ಅನೇಕ ಸಂಕಟಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಹುತಾತ್ಮ ಭಗತ್‌ಸಿಂಗ್ ನಮ್ಮೆಲ್ಲರಿಗಾಗಿ ನಿರ್ದಿಷ್ಟವಾದ ಸಂದೇಶವನ್ನು ಬಿಟ್ಟು ಹೋಗಿದ್ದಾರೆಂದು ಅನಿಸುವುದಿಲ್ಲವೆ? ★

ಮೇನ್ ಸ್ಟ್ರೀಮ್ ಸಾಭಾರ

ಅನು : ಸು.ಕಾ

ಭಗತ್‌ಸಿಂಗರ ಬಲಿದಾನಕ್ಕೆ ಗಾಂಧೀಜಿಯ ಪ್ರಶಂಸೆ

೧೯೩೧ರ ಮಾರ್ಚಿ ೨೩ನೇ ತಾರೀಖಿನ ಸೋಮವಾರ ಗಾಂಧೀಜಿ ದೆಹಲಿಗೆ ಹೋದರು. ಭಗತ್‌ಸಿಂಗ್ ಮತ್ತು ಅವನ ಸಂಗಡಿಗರ ಮೇಲಿದ್ದ ಮರಣ ದಂಡನೆಯ ಶಿಕ್ಷೆಯನ್ನು ತೆಗೆದು ಹಾಕಬೇಕೆಂದು ತಮ್ಮ ಮನವಿ ಸಲ್ಲಿಸಲು. ಲಾರ್ಡ್ ಇರ್ವಿನ್ನರನ್ನು ಭೇಟಿ ಮಾಡುವುದು ಅವರ ಉದ್ದೇಶವಾಗಿತ್ತು. ಇದಕ್ಕೂ ಮೊದಲು ಅವರು ಹೇಗಾದರೂ ಮಾಡಿ ಈ ಶಿಕ್ಷೆಯನ್ನು ರದ್ದುಮಾಡ ಬೇಕೆಂದು ಅವರ ಕಡೆಯ ಪ್ರಯತ್ನವಾಗಿತ್ತು. ಲಾರ್ಡ್ ಇರ್ವಿನ್ನರು ಒಪ್ಪಲಿಲ್ಲ.

ದೇಶದಲ್ಲಿನ ಜನತೆಗೂ ಸರ್ಕಾರಕ್ಕೂ ಇರುವ ತಾತ್ಕಾಲಿಕ ಶಾಂತ ಸಂಬಂಧ ಹೇಗೋ ಕೆಡುವುದು ಬೇಡ ಎನ್ನುವುದು ಗಾಂಧೀಜಿಯ ಅಭಿಪ್ರಾಯವಾಗಿತ್ತು. ಆದರೆ ಇರ್ವಿನ್ನರು ಹಠ ಹಿಡಿದರು.

ನಿಮ್ಮ ತತ್ವಗಳಿಗೆ ವಿರುದ್ಧವಾದ ದಾರಿ ಹಿಡಿದ, ಬೇರೆಯ ಮಾರ್ಗ ವನ್ನು ಅನುಸರಿಸಿದವರ ಪರವಾಗಿ ನೀವು ಇಷ್ಟು ದಯಾರ್ದ್ರವಾಗಿ ಬೇಡಿ ಕೊಳ್ಳುವುದರ ಅಂತರ್ಯವೇನು? ನಾನು ಹೇಗೆ ಯೋಚಿಸಿದರೂ, ಕೇವಲ ರಾಜಕೀಯ ಕಾರಣಗಳಿಗಾಗಿ ಇಂತಹ ವಿಷಯಗಳಲ್ಲಿ ನನ್ನ ತೀರ್ಮಾನ ಬದಲಾ ವಣೆಗೆ ಒಳಪಡಲು ಅವಕಾಶ ಕೊಡುವುದು ಸರಿಯಲ್ಲ ಎಂದೇ ನನ್ನ ಖಚಿತ ಅಭಿಪ್ರಾಯ. ನಾನು ಹಾಗೆ ಮಾಡಿದರೆ ಕಾನೂನಿನ ಪ್ರಕಾರ ಅದೂ ಸಹ ಶಿಕ್ಷಾರ್ಹ ಆಗುತ್ತದೆ ಎಂದು ಕಡ್ಡಿ ಮುರಿದಂತೆ ಹೇಳಿದರು.

ಮಾರ್ಚಿ ೨೩ರ ಬೆಳಿಗ್ಗೆಯೂ ಗಾಂಧೀಜಿ ಭಗತ್‌ಸಿಂಗ್ ಹಾಗೂ ಅವನ ಸಂಗಡಿಗರಿಗಾಗಿ ಕ್ಷಮಾದಾನ ಮಾಡಲು ಇರ್ವಿನ್ನರಿಗೆ ಮತ್ತೊಂದು ಪತ್ರವನ್ನು ಬರೆದರು. ಆಗಲೂ ಗಾಂಧೀಜಿಯ ಮಾತಿಗೆ ಇರ್ವಿನ್ ಒಪ್ಪದೆ ಆ ಪ್ರಯತ್ನವೂ ವಿಫಲವಾಯಿತು. ಅದೇ ದಿನ ರಾತ್ರಿ ಭಗತ್‌ಸಿಂಗ್, ಸುಖದೇವ್ ಮತ್ತು ರಾಜ ಗುರು ಮೂವರನ್ನೂ ಗಲ್ಲಿಗೆ ಏರಿಸಲಾಯಿತು. ಅಂತೆಯೆ ಆತುರಾತುರವಾಗಿ ಅವರ ಮೃತದೇಹಗಳನ್ನು ಶರದ್ರೂನದಿ ತೀರದಲ್ಲಿ ಅರೆಬರೆ ಸುಟ್ಟು ಭಸ್ಮ ವನ್ನು ನದಿಗೆ ಎಸೆಯಲಾಯಿತು.

ಈ ಸುದ್ದಿ ದೇಶದಲ್ಲಿ ಎಲ್ಲರನ್ನೂ ಕೆರಳಿಸಿತು. ನಮಗೂ ಇಂಗ್ಲೆಂಡಿಗೂ ಮಧ್ಯೆ ಭಗತ್‌ಸಿಂಗನ ಪಾರ್ಥಿವ ದೇಹ ಅಡ್ಡ ನಿಲ್ಲುತ್ತದೆ ಎಂದು ನೆಹರೂ ಕೆರಳಿ ಹೇಳಿದರು. ತಾವು ಎಷ್ಟು ಕೇಳಿಕೊಂಡರೂ ಕರುಣೆ ತೋರದೆ ಇದ್ದಕ್ಕಿದ್ದಂತೆ ಅವರನ್ನು ಗಲ್ಲಿಗೇರಿಸಿದುದಕ್ಕೆ ಗಾಂಧೀಜಿ ತೀವ್ರವಾಗಿ ಮನನೊಂದು ಅವರಿಗೆ ನಿಂತ ನೆಲ ಕುಸಿದಂತಾಗಿತ್ತು.

ಮಾರ್ಚಿ ೨೪ ದೇಶಾದ್ಯಂತ ಶೋಕದಿನವಾಗಿ ಆಚರಿಸಲಾಯಿತು.

ಪೊಲೀಸರಿಗೂ ಎಲ್ಲ ಕಡೆಯ ಪ್ರದರ್ಶನಕಾರರಿಗೂ ಘರ್ಷಣೆ ನಡೆಯಿತು. ಹಿಂಸಾಚಾರದ ದಳ್ಳುರಿಯಲ್ಲಿ ೧೫೦ ಜನ ಸತ್ತರು. ೬೦೦ಕ್ಕೂ ಹೆಚ್ಚು ಜನಕ್ಕೆ ಗಾಯಗಳಾದವು. ಅನೇಕರನ್ನು ಬಂಧಿಸಲಾಯಿತು.

ಸರ್ಕಾರದ ಮುಂದೆ ಗಾಂಧೀಜಿ ಇಟ್ಟಿದ್ದ ಕೆಲವು ಷರತ್ತುಗಳಿಗೂ, ಈ ಮರಣದಂಡನೆಗೂ ಯಾವುದೇ ಸಂಬಂಧವಿರಲಿಲ್ಲವಾದರೂ, ಗಾಂಧೀಜಿ ಕರಾಚಿಗೆ ಬಂದಾಗ ಕೆಂಪು ಅಂಗಿಯ ನವಜವಾನ್ ಸಂಘಟನೆಯ ಸದಸ್ಯರು ಗಾಂಧೀ ಸಂಧಾನ ಭಗತ್‌ಸಿಂಗನನ್ನು ಗಲ್ಲಿಗೇರಿಸಿತು. ಗಾಂಧೀ ತತ್ವಕ್ಕೆ ಧಿಕ್ಕಾರ! ಗಾಂಧೀ, ನೀವು ವಾಪಸು ಹೋಗಿ! ಎಂದು ಕೂಗಲು ಪ್ರಾರಂಭಿಸಿದರು.

ಗಾಂಧೀಜಿಗೆ ಅವರ ಮೇಲೆ ಸ್ವಲ್ಪವೂ ಕೋಪ ಬರಲಿಲ್ಲ. ರೇಗಲಿಲ್ಲ. ಮೆಲ್ಲಗೆ ಒಳ್ಳೆಯ ಮಾತುಗಳನ್ನು ಹೇಳಿದರು. ಗಾಂಧೀಜಿಯವರ ಮೇಲೆ ಹಲ್ಲೆ ಮಾಡಿದರು ಎನ್ನುವ ಗಾಳಿ ಸುದ್ದಿಯನ್ನು ಅಲ್ಲಗಳೆದ ಪತ್ರಿಕಾ ಹೇಳಿಕೆ ನೀಡಿದರು. ಈ ಮಕ್ಕಳದು ಗಂಭೀರವಾದ ಕೋಪಪ್ರದರ್ಶನ ಅಷ್ಟೆ. ನನ್ನ ಶರೀರಕ್ಕೆ ಅಪಾಯ ಮಾಡಬಹುದಿತ್ತು. ಅವರು! ಆದರೆ ಹಾಗೆ ಮಾಡಲಿಲ್ಲ! ನನ್ನನ್ನು ಅವಮಾನಿಸಬಹುದಿತ್ತು. ಆದರೆ ಕಪ್ಪು ಬಟ್ಟೆಯ ಹೂಗಳನ್ನು ಅರ್ಪಿಸಿ ತಮ್ಮ ಕೋಪ ಅಸಮಾಧಾನ ತೋರಿಸಿದರಷ್ಟೆ. ಅದನ್ನು ನಾನು ಆ ಮೂವರು ದೇಶಭಕ್ತರ ಚಿತಾಭಸ್ಮದ ಸಂಕೇತ ಎಂದೇ ತಿಳಿದು ಪೂಜಿಸುತ್ತೇನೆ! ನಮ್ಮ ದೇಶದಲ್ಲಿ ಅಂಜಿಕೆಯ ಹೇಡಿತನವನ್ನು ಮೆಟ್ಟಿರುವಾಗ ಈ ಮೂವರು ತರುಣರು ಅತಿಧೈರ್ಯ-ಅತಿತ್ಯಾಗ ನಮಗೆ ಸಾಧ್ಯ ಎಂದು ತೋರಿಸಿಕೊಟ್ಟಿದ್ದಾರೆ! ಭಗತ್‌ಸಿಂಗನ ಧೈರ್ಯ ಸಾಹಸಕ್ಕೆ ನಾವೆಲ್ಲ ತಲೆಬಾಗಬೇಕು, ಇದಕ್ಕಾಗಿ ತರುಣರು ನೊಂದುಕೊಳ್ಳಬಾರದು. ಭಗತ್ ಮತ್ತು ಅವನ ಮಿತ್ರರು ಯಾವ ಕಾರಣಕ್ಕಾಗಿ ಪ್ರಾಣ ಕೊಟ್ಟರೋ, ಆ ಸಾತಂತ್ರ್ಯವನ್ನು ನಾವು ಗಳಿಸಿ, ಸಾಧಿಸಲು ಶ್ರಮಿಸಿದರೆ ಅವರ ಆತ್ಮಗಳಿಗೆ ಶಾಂತಿಸಿಗುತ್ತದೆ ಎಂದರು. ಗಾಂಧೀಜಿಯ ಈ ಹೇಳಿಕೆಯನ್ನು ನೋಡಿ ಕೇಳಿ ತರುಣರ ಮನಕರಗಿ, ಆ ಸದಸ್ಯರು ಗಾಂಧೀಜಿಯ ಬಳಿಗೆ ಹೋಗಿ ಅವರ ಜತೆ ಮನ ಬಿಚ್ಚಿ ಮಾತುಕತೆ ನಡೆಸಿದರು. ಬೆಟ್ಟದಂತೆ ಬಂದದ್ದು ಮಂಜಿನ ಹಾಗೆ ಕರಗಿ ಹೋದದ್ದು ಗಾಂಧೀಜಿಗೆ, ಆ ಸದಸ್ಯರಿಗೆ ಸಮಾಧಾನ, ತೃಪ್ತಿ ತಂದಿತು. ★

ವಾಚಕರಲ್ಲಿ ವಿನಂತಿ

"ಜನಪದ ವಿಚಾರ"ವನ್ನು ತಮ್ಮ ಸ್ನೇಹಿತರಿಗೂ, ಬಂಧುಗಳಿಗೂ ಪರಿಚಯ ಮಾಡಿಕೊಟ್ಟು ಅದರ ಅಭಿವೃದ್ಧಿಗೆ ಸಹಕರಿಸಬೇಕಾಗಿ ವಿನಂತಿ.

ದೇಶದ ವಿಭಜನೆ ಮತ್ತು ಗಾಂಧೀ

ನಮ್ಮ ದೇಶದ ವಿಭಜನೆಗೆ ಗಾಂಧೀಜಿ ಪ್ರಮುಖ ಕಾರಣರಾಗಿದ್ದಾರೆಂಬುದಾಗಿ ಡಾ॥ ಕೆ. ಎಸ್. ನಾರಾಯಣಾಚಾರ್ಯರ್ ಹುಬ್ಬಳ್ಳಿಯ ಒಂದು ಸಭೆಯಲ್ಲಿ ಹೇಳಿದ್ದಾರೆ. [ಪ್ರಜಾವಾಣಿ, ೧೩ ಮೇ] ದೇಶದ ವಿಭಜನೆಯನ್ನು ಮಾಡಬಹುದೆಂಬ ತಮ್ಮ ಅಭಿಪ್ರಾಯವನ್ನು ತಿಳಿಸಿ ಇಂಗ್ಲೆಂಡಿನ ರಾಣಿಗೆ ಗಾಂಧೀಜಿ ಪತ್ರ ಬರೆದಿದ್ದರೆಂದೂ, ಆ ಬಗ್ಗೆ ಸಾಕ್ಷಾಧಾರಗಳಿವೆಯೆಂದೂ ಅವರು ಹೇಳಿದ್ದಾರೆ. ಗಾಂಧೀಜಿಯವರ ವಿರುದ್ಧ ಈ ರೀತಿಯ ಆಪಾದನೆಗಳು ಆಗಾಗ್ಗ ಕೇಳಿ ಬರುತ್ತವೆ. ಆದರೆ ಬಹು ಹೆಚ್ಚಿನ ಆಪಾದನೆಗಳು ಪೂರ್ವಾಗ್ರಹ ಪೀಡಿತ ಮನೋಭಾವನೆಯಿಂದ ಕೂಡಿರುತ್ತವೆ. ೧೯೪೩ರಲ್ಲಿ ನಮ್ಮ ದೇಶದಲ್ಲಿದ್ದ ಅಲ್ಪ ಸಂಖ್ಯಾತ, ಆದರೆ, ರಾಜಕೀಯವಾಗಿ ಬಹಳ ಪ್ರಭಾವಶಾಲಿಯಾಗಿದ್ದ ಮುಸ್ಲಿಂ ನಾಯಕರ ಬಿಗಿ ನಿಲುವು ಮತ್ತು ಕಾಂಗ್ರೆಸ್ ಪಕ್ಷ ಬಗ್ಗೆ ಮುಸ್ಲಿಂ ಲೀಗ್ ಹೊಂದಿದ್ದ ನೀತಿ ಹಾಗೂ ಇಂಗ್ಲೀಷ್ ಸರ್ಕಾರ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಬಗ್ಗ ಹೊಂದಿದ್ದ ರಾಜಕೀಯ ಸಂಬಂಧ ಇತ್ಯಾದಿಗಳು ದೇಶದ ವಿಭಜನೆಗೆ ಕಾರಣಗಳಾದವೇ ಹೊರತು ಗಾಂಧೀಜಿಯವರ ನಿಲುವಾಗಲೀ, ಕೃತಿಯಾಗಲೀ. ಕಾರಣವಲ್ಲ ಎಂದು ಅಂದಿನ ರಾಜಕೀಯ ಬೆಳವಣಿಗೆಗಳನ್ನು ತಿಳಿದವರೆಲ್ಲರಿಗೂ ಈ ವಿಷಯ ಗೊತ್ತಿದೆ. ದೇಶದ ವಿಭಜನೆ ೧೯೪೭ರಲ್ಲಿ ಆಯಿತಾದರು ವಿಭಜನೆಯ ಕಾರಣಗಳು ನಮ್ಮ ದೇಶದ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾದಾಗಲೇ ಕಾಣಿಸಿಕೊಂಡಿದ್ದವೆಂಬುದನ್ನು ಮರೆಯುವಂತಿಲ್ಲ. ಮೊದಲ ಸ್ವಾತಂತ್ರ್ಯ ಯುದ್ಧ ೧೮೫೭ರಲ್ಲಿ ಆಯಿತೆಂದು ಹೇಳುತ್ತಾರೆ. ಆ ವೇಳೆಗಾಗಲೆ ಇಂಗ್ಲೀಷರು ಭಾರತೀಯರಲ್ಲಿ ಕೋಮು ಭಾವನೆಯನ್ನು ಬಿತ್ತಿದ್ದರು ಮತ್ತು ಮುಂದಿನ ವರ್ಷಗಳಲ್ಲಿ ಬ್ರಿಟಿಷರು ತಮ್ಮ ಒಡೆದು ಆಳುವ ನೀತಿಯ ಮೂಲಕ ಭಾರತೀಯರನ್ನು ಕೋಮು. ಜಾತಿ, ವರ್ಗ ಮುಂತಾದ ಸಾಮಾಜಿಕ ಭೇದಗಳಲ್ಲಿ ಕಟ್ಟಿ ಹಾಕಿದ್ದರು. ದೇಶದ ರಾಜಕಾರಣಕ್ಕೆ ಗಾಂಧೀ ಬಂದದ್ದು ೧೯೩೧ರಲ್ಲಿ. ಕಾಲ ಗಣತಿಯ ಪ್ರಕಾರ ಗಾಂಧೀಜಿಯವರ ರಾಜಕೀಯ ಪ್ರವೇಶದ ಸುಮಾರು ೫೦ ವರ್ಷಗಳ ಮೊದಲೇ ದೇಶದ ವಿಭಜನೆಯ ಬೀಜಗಳು ಬಿತ್ತಲ್ಪಟ್ಟಿದ್ದವು. ಆ ಬೀಜಗಳೇ ೧೯೪೭ರ ವೇಳೆಗೆ ಹೆಮ್ಮರವಾಗಿ ಬೆಳೆದು ನಿಂತಿದ್ದವು. ದೇಶದ ಇತಿಹಾಸವನ್ನು ಬದಲಾಯಿಸಲು ಅಥವಾ ತಡೆದು ನಿಲ್ಲಿಸಲು ಸಾಧ್ಯವಾಗದಂಥ ಗಂಭೀರ ಹಾಗು ಭಯಾನಕ ಪರಿಸ್ಥಿತಿ ದೇಶದಲ್ಲಿ ನಿರ್ಮಾಣವಾಗಿತ್ತು. ಆದಾಗ್ಯೂ ಗಾಂಧೀಜಿ ತಮ್ಮ ಜೀವಿತದ ಕೊನೆಯ ಉಸಿರಿನ ವರೆಗೂ ದೇಶದ ವಿಭಜನೆಗೆ ಮೂಲ ಕಾರಣವಾಗುತ್ತಿದ್ದ ಕೋಮು ವೈಮನಸ್ಸನ್ನು ಹೋಗಲಾಡಿಸಲು ಪ್ರಯತ್ನಿಸಿದರು. ನಾರಾಯಣಾಚಾರ್ಯರು ಸ್ವತಃ ತಮ್ಮ ಭಾಷಣದಲ್ಲಿ ಹೇಳಿರುವಂತೆ ಗಾಂಧೀಜಿ ತಮ್ಮ ದೇಹದ ವಿಚ್ಛೇದನೆಯಾದರು ಸರಿಯೇ

ದೇಶದ ವಿಭಜನೆಗೆ ಸಿದ್ಧರಿರಲಿಲ್ಲ. ಅಲ್ಲದೆ ಗಾಂಧೀಜಿಯವರು ತಮ್ಮ ಸಾರ್ವಜನಿಕ ಜೀವನದ ೭೬ ವರ್ಷಗಳ ದೀರ್ಘ ಅವಧಿಯಲ್ಲಿ ಎಂದೂ ಗೌಪ್ಯತೆಯನ್ನು ಸಮರ್ಥಿಸಿಕೊಂಡವರಲ್ಲ. ಅಲ್ಲದೆ, ರಾಜಕಾರಣದಲ್ಲಿ ಗೌಪ್ಯತೆ ಒಂದು ಪಾಪವೆಂದೂ ಅವರು ಭಾವಿಸಿದ್ದರು. ಅದರಂತೆ ಅವರು ತಮ್ಮ ರಾಜಕೀಯ ಜೀವನವನ್ನು ನಡೆಸಿಕೊಂಡು ಬಂದರು ಇಂಥ ದೃಢ ನಿಲುವನ್ನು ಹೊಂದಿದ್ದ ಗಾಂಧೀಜಿ ಬ್ರಿಟಿಷ್ ರಾಣಿಗೆ ದೇಶ ವಿಭಜನೆ ಮಾಡಬಹುದೆಂದು ತಿಳಿಸಿ ಗೌಪ್ಯವಾಗಿ ಪತ್ರ ಬರೆದಿದ್ದರೆಂಬುದನ್ನು ಯಾರೂ ಊಹಿಸಲು ಸಾಧ್ಯವಿಲ್ಲ. ಅಲ್ಲದೇ ೧೯೦೫ ರಲ್ಲಿ ಮುಸ್ಲಿಂಲೀಗ್ ಸ್ಥಾಪನೆಯಾಯಿತು. ಜಿನ್ನಾ ಅದರ ನಾಯಕರಾದರು. ಪ್ರತ್ಯೇಕವಾದ ಮುಸ್ಲಿಂ ದೇಶವಾಗಿ ಪಾಕಿಸ್ತಾನವನ್ನು ಹೊಂದಬೇಕೆಂಬುದೇ ಮುಸ್ಲಿಂಲೀಗ್ ಮತ್ತು ಜಿನ್ನಾ ಅವರ ಸ್ಪಷ್ಟ ಉದ್ದೇಶವಾಗಿತ್ತು ಮತ್ತು ಆ ಉದ್ದೇಶದ ನೆರವೇರಿಕೆಗಾಗಿ ಅವರು ಯಾವುದೇ ಪ್ರಕಾರದ ಸಂಧಾನಕ್ಕೆ ಸಿದ್ಧವಿರಲಿಲ್ಲ. ೧೯೪೬ರಲ್ಲಿ ದೇಶದಲ್ಲಿ ಕೋಮು ಗಲಭೆಗಳ ಕಾರಣದಿಂದ ಪ್ರಪಂಚ ಅದುವರೆಗೂ ಕಂಡರಿಯದಂಥ ಪ್ರಮಾಣದಲ್ಲಿ ಆದ ರಕ್ತಪಾತ ಮತ್ತು ನರಮೇಧವನ್ನು ನೋಡಲಾರದೆ ವಿಭಜನೆಗೆ ಗಾಂಧೀಜಿ ಅನಿವಾರ್ಯವಾಗಿ ಒಪ್ಪಬೇಕಾಯಿತು. ಇದಕ್ಕೂ ಮುನ್ನ ಕಾಂಗ್ರೆಸ್ ಪಕ್ಷ ಗಾಂಧೀಜಿಯವರಿಗೇ ಗೊತ್ತಿಲ್ಲದಂತೆ ದೇಶದ ವಿಭಜನೆಯನ್ನು ಒಪ್ಪಿಕೊಂಡಾಗಿತ್ತು. ಇವು ಐತಿಹಾಸಿಕ ಸತ್ಯಗಳಿರುವಾಗ ಗಾಂಧೀಜಿ ದೇಶದ ವಿಭಜನೆಗೆ ಪ್ರಮುಖ ಕಾರಣರೆಂದು ಎಲ್ಲ ವಿಷಯ ಬಲ್ಲ ಡಾ॥ ನಾರಾಯಣಾಚಾರ್ಯರ ಹೇಳಿಕೆ ಪೂರ್ವಾಗ್ರಹ ಪೀಡಿತವೂ, ದೋಷಪೂರ್ಣವೂ ಆಗಿದೆ. ವಿಭಜನೋತ್ತರ ಭಾರತದಲ್ಲಿ ಕಳೆದ ೫೦ ವರ್ಷಗಳಿಂದ ದೇಶದಲ್ಲಿ ಉಂಟಾಗಿರುವ ಕೋಮು-ವೈಮನಸ್ಸನ್ನು ಮತ್ತು ಇತರ ಸಾಮಾಜಿಕ ಅವನತಿಯನ್ನು ತಡೆಯಲು ನಾರಾಯಣಾಚಾರ್ಯರು ತಮ್ಮ ಪಾಂಡಿತ್ಯವನ್ನು ಏಕೆ ಉಪಯೋಗಿಸಲಿಲ್ಲ ಎಂಬುದು ನಿಗೂಢವಾಗಿದೆ. ಹುತಾತ್ಮರಾದ ಗಾಂಧೀ ಯಾವ ವಿಷಯದಲ್ಲೂ ತಮ್ಮನ್ನು ತಾವು ಸಮರ್ಥಿಸಿಕೊಳ್ಳಲಾರರು. ಆದ್ದರಿಂದ ಗಾಂಧೀಜಿಯವರ ಕೃತಿಯನ್ನು ಮತ್ತು ಮಾತುಗಳನ್ನು ಸಂದರ್ಭಸಹಿತವಾಗಿ ಅರ್ಥ ಮಾಡಿಕೊಳ್ಳಬೇಕೇ ಹೊರತು ಅವುಗಳನ್ನು ಸಂದರ್ಭದಿಂದ ದೂರ ಮಾಡಿ ಅಲ್ಲ. ಸತ್ಯವನ್ನು ಆರಾಧಿಸುವ ಹಾಗು ಸತ್ಯವನ್ನು ಹೇಳಲು ಹಿಂಜರಿಯದ ಡಾ॥ ನಾರಾಯಣಾಚಾರ್ಯರು ಈ ಕುರಿತು ತಮ್ಮ ಬಳಿಯಿರುವ ಸಾಕ್ಷಾಧಾರವನ್ನು ಬಹಿರಂಗಗೊಳಿಸಿ ಗಾಂಧೀಜಿಯವರ ಆತ್ಮಕ್ಕೆ ಶಾಂತಿಯನ್ನು ಕೊಡಬಹುದಲ್ಲವೇ? ಗಾಂಧೀಜಿಯವರು ದೇಶದ ವಿಭಜನೆಗೆ ಕಾರಣರಾದರೆಂದು ಹೇಳುವುದಕ್ಕಿಂತ ಅದನ್ನು ತಡೆಯಲು ಹಲವಾರು ಕಾರಣಗಳಿಂದ ವಿಫಲರಾದರೆಂದು ಹೇಳುವುದು ಹೆಚ್ಚು ಸಮಂಜಸ. ★

–ಸುರೇಂದ್ರ ಕೌಲಗಿ

ಗುಬ್ಬಚ್ಚಿ – ಗುಜರಾತ

ನಮ್ಮ ಮನೆ ಹತ್ತಿರಲ್ಲಿ ಇರುವ ಗಿಡದ ಮೇಲೆ ದಿನವೂ ಬಂದು ಕುಳಿತು ಆಡಿ ನಕ್ಕು ನಲಿದು ಹಾರಿ ಹೋಗುತ್ತಿದೆ ಒಂದು ಪುಟ್ಟ ಗುಬ್ಬಚ್ಚಿ. ಗುಬ್ಬಚ್ಚಿ ಪುಟ್ಟದಾದರೂ, ಇದೆಯಲ್ಲವೇ ಅದಕ್ಕೂ ಮಿಡಿತ, ಹೃದಯ ಬಡಿತ, ಮನುಷ್ಯನ ನೆರಳು ಕಂಡರೆ ಸಾಕು. ಹಾರುವುದು ಬುರ್ರನೇ, ಒಂದೇ ನೆಗೆತಕೆ ಆಕಾಶದೆತ್ತರಕೆ, ತನಗೆ ತೋಚಿದ ದಿಕ್ಕಿಗೆ. ಯೋಚಿಸಿದೆ ಒಂದು ನಿಮಿಷ, ಇದು ಯಾರನ್ನೂ ನಂಬಿ, ನೆಚ್ಚಿ ಬದುಕಿಲ್ಲ, ಅಹಮಿಕೆ, ಅಹಂಕಾರ ಇದರಿಂದ ಬಲು ದೂರ, ಯಾರ ಕುತ್ತಿಗೆ ಕೊಯ್ಯಲು, ಕನಸು ಮನಸಿನಲ್ಲೂ ಹೊಂಚು ಹಾಕಿಲ್ಲ, ಸಂಚು ಮಾಡಿ ಕುಳಿತಿಲ್ಲ, ಹಿಡಿದರೆ ಇದು ಹಿಡಿ ತುಂಬ. ಬಿಟ್ಟರೆ– ಹಾರಾಟ ಜಗದಗಲ, ಮುಗಿಲಗಲ. ಯೋಚಿಸುತ್ತಲೇ ಅದರ ಬೆನ್ನು ಬಿದ್ದೆ, ಮನುಷ್ಯನಿಗಿಲ್ಲದ ಸ್ವಾತಂತ್ರ್ಯ, ಅನುಮಾನ, ಅತಂಕ, ಜಾತಿ, ಮತ, ವರ್ಣಗಳ ಕಿತ್ತಾಟ, ಗುಬ್ಬಚಿಗೇಕೆ ಕಾಡುತ್ತಿಲ್ಲ? ಇದೇಕೆ ಇವುಗಳ ಹೆಸರಿನಲಿ ಕಿತ್ತಾಡುವುದಿಲ್ಲ? "ನೀರು ಕಂಡಲ್ಲಿ ಮುಳುಗಿ, ಮರವ ಕಂಡಲ್ಲಿ ಸುತ್ತಿ ಕಣ್ಣು ಮುಚ್ಚಾಲೆ ಆಟ ಆಡುವುದಿಲ್ಲ, ರಕ್ತದೋಕುಳಿ ಹರಿಸುವುದಿಲ್ಲ, ಗುಬ್ಬಚ್ಚಿಗೆ, ರಾಮನೂ ಅಷ್ಟೇ, ಬಾಬರನೂ ಅಷ್ಟೇ, ರಾಮನವಮಿ ಬಂದರೆ ಕುಣಿಯುವುದಿಲ್ಲ. ಮೊಹರಂ ಬಂದರೆ ಕೆಕ್ಕರಿಸುವುದಿಲ್ಲ, ಗುಜರಾತಿರಲಿ, ಕಾಶ್ಮೀರವೇ ಇರಲಿ, ಅಮೇರಿಕಾ, ತಾಲಿಬಾನಗಳೇ ಇರಲಿ, ಹಸಿವಾದಾಗ ಆಹಾರ ಹುಡುಕುವುದು, ನೀರು ಕಂಡಲ್ಲಿ ಗುಟುಕರಿಸುವುದು, ಇದ್ದುದರಲಿ ಮರಿಗಳಿಗೆ ಗುಟುಕಿಹಾಕಿ, ಬೆಳಸಿ, ತನ್ನ ದಾರಿಯಲಿ ಹಾರಲಿಬಿಡುವುದು. ಅಲ್ಲವೇ– ಪ್ರಕೃತಿ ನೀತಿ, ಕುಳಿತೇ ಇದ್ದೇನೆ ಗುಬ್ಬಚ್ಚಿಯನು, ಗುಜರಾತನ್ನು ನೆನೆಯುತ್ತ ನಾನು. ಗುಬ್ಬಚ್ಚಿ ನಲಿಯುತ್ತಲೇ ಇದೆ ಅದೇ ಮರದ ಮೇಲೆ. ನನ್ನ ದೃಷ್ಟಿ ಹೊರಳುತ್ತಿದೆ ಗುಜರಾತಿನ ಕಡೆಗೆ. ದೇಶ ಕಟ್ಟಲು, ಮನಸ್ಸು ಬೆಸೆಯಲು, ಗುಬ್ಬಚ್ಚಿಯನು ನೋಡಿದರೆ ಸಾಕು ಬೇಕಿಲ್ಲ ನಮಗೆ ಯಾವ ವಿಶ್ವವಿದ್ಯಾಲಯ, ಮನೆ, ಮಠ, ಮಸೀದಿಗಳ ಒಣ ವೇದಾಂತ.

ಸತ್ಯಾನಂದ ಪಾತ್ರೋಟ

ರಾಷ್ಟ್ರಪತಿ ಭವನ ಸಾಕಲಾಗದ ಬಿಳಿಯಾನೆಯೇ?

ರಾಷ್ಟ್ರಪತಿಗೆ ತಿಂಗಳಿಗೆ ೫೦.೦೦೦ ರೂ. ವೇತನ. ಇದು ತೆರಿಗೆ ವ್ಯಾಪ್ತಿಗೆ ಬರುವುದಿಲ್ಲ. (ನಿವೃತ್ತರಾದ ಮೇಲೆ ತೆರಿಗೆ ವ್ಯಾಪ್ತಿಗೆ ಬರದಂತೆ ೨೫,೦೦೦ ರೂ. ನಿವೃತ್ತಿ ವೇತನ ಪಡೆಯುತ್ತಾರೆ. ದೇಶದ ಯಾವ

ನಗರವನ್ನು ಇಷ್ಟಪಟ್ಟರೂ, ಅಲ್ಲಿ ಸುಸಜ್ಜಿತವಾದ ವಿಶಾಲವಾದ ಉಚಿತ ಮನೆಯನ್ನೂ, ಅಗತ್ಯವಾದ ಸಿಬ್ಬಂದಿಯನ್ನೂ ಅವರು ಪಡೆದುಕೊಳ್ಳುತ್ತಾರೆ. ಅವರು ದೇಶದಲ್ಲಿ ಹಾಗೂ ವಿದೇಶಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಪ್ರವಾಸ ಕೈಗೊಳ್ಳಬಹುದು. ಇದಕ್ಕೆ ಯಾವ ಮಿತಿಯೂ ಇಲ್ಲ. ಅವರೊಂದಿಗೆ ತೆರಳುವ ಸಿಬ್ಬಂದಿ ವರ್ಗವನ್ನೂ ಅವರು ನಿರ್ಧರಿಸಬಹುದು. ಹೀಗೆ ಇನ್ನೂ ಎಷ್ಟೋ ಸವಲತ್ತುಗಳು ರಾಷ್ಟ್ರಪತಿಗಿದೆ.

ರಾಷ್ಟ್ರಪತಿಭವನ ನವದೆಹಲಿಯಲ್ಲಿದೆ. ಹೈದರಾಬಾದ್ ಮತ್ತು ಸಿಮ್ಲಾಗಳಲ್ಲಿ ಒಂದೊಂದು ಭವನಗಳಿವೆ. ಎರಡೂ ಕಡೆ ಅಗತ್ಯವಾದ ಸಿಬ್ಬಂದಿ ವರ್ಗ ಇದೆ. ದೆಹಲಿಯ ರಾಷ್ಟ್ರಪತಿ ಭವನ ೪೦೦ ಎಕರೆ ವಿಶಾಲ ಪ್ರದೇಶವನ್ನು ಆವರಿಸಿದೆ. ೨೦೦೦ ಪೋಲೀಸರು ಇಲ್ಲಿ ಕರ್ತವ್ಯದಲ್ಲಿದ್ದಾರೆ. ಇಲ್ಲಿ ರಂಗ ಮಂದಿರ ಕ್ಲಬ್, ಈಜುಕೊಳ, ಪೋಲೊ ಮೈದಾನ, ಪ್ರಿಟಿಂಗ್ ಪ್ರೆಸ್, ಲಾಂಡ್ರಿ, ಕಿಚನ್ ಗಾರ್ಡನ್, ಪೆಟ್ರೋಲ್ ಬಂಕ್, ಬೇಕರಿ, ಶಾಲೆ ಎಲ್ಲವೂ ಇವೆ. ತೋಟದ ಕೆಲಸಗಾರರು, ಬಡಗಿಗಳು, ವಿದ್ಯುಚ್ಛಕ್ತಿ ಕೆಲಸಗಾರರು. ಪ್ಲಂಬರ್ಸ್, ಅಡಿಗೆಯವರು, ಅಧಿಕಾರಿಗಳು, ವೈದ್ಯರು ಇಲ್ಲಿ ಕೆಲಸದಲ್ಲಿದ್ದಾರೆ. ಇವರೆಲ್ಲಾ ಇದೇ ಆವರಣದಲ್ಲಿರುವ ನಿವಾಸಗಳಲ್ಲಿ ವಾಸಿಸುತ್ತಾರೆ. ಪ್ರತಿದಿನ ಇಲ್ಲಿ ಅತಿಥಿಗಳ ಲೆಕ್ಕಾಚಾರದಂತೆ ಚೈನೀಸ್, ಮೆಕ್ಸಿಕನ್, ಮುಘಲಾಯಿ ಹಾಗೂ ಕಾಂಟಿನೆಂಟಲ್ ಅಡಿಗೆ ಪದಾರ್ಥಗಳನ್ನು ಅತಿಥಿಗಳಿಗಾಗಿ ತಯಾರಿಸಲಾಗುತ್ತದೆ.

ರಾಷ್ಟ್ರಪತಿಯ ಕುಟುಂಬವರ್ಗದವರ, ಅತಿಥಿಗಳ, ಅಧಿಕಾರಿಗಳ ಬಟ್ಟೆಗಳನ್ನು ಶುಚಿಗೊಳಿಸಲು ೨.೪೦ ಕೋಟಿ; ಸಿಬ್ಬಂದಿ ವರ್ಗದವರ ಖರ್ಚು-ವೆಚ್ಚ ೩.೨೯ ಕೋಟಿ; ರಾಷ್ಟ್ರಪತಿ ಭವನದ ನಿರ್ವಹಣೆ ಮತ್ತು ಅತಿಥಿ ಆದರೋಪಚಾರ ೭.೮೪ಕೋಟಿ, ಹೈದರಾಬಾದ್ ಮತ್ತು ಸಿಮ್ಲಾಗಳಲ್ಲಿನ ಭವನಗಳ ನಿರ್ವಹಣೆ ೩.೨೦ಕೋಟಿ. ಹೀಗೆ ವೆಚ್ಚದ ಪಟ್ಟಿ ಬೆಳೆಯುತ್ತದೆ, ಬೆಳೆಯುತ್ತಲೇ ಇರುತ್ತದೆ?

– ಸಮಾಜವಾದಿ ಮಾತುಕತೆಯಿಂದ

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ ಅವುಗಳನ್ನು ಪ್ರಕಟಿಸಲಾಗುವುದು.
ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ಮನುಷ್ಯನ ವಿಕೃತ ಮನಸ್ಸಿನ ಸಂಕೇತ ಗೋಧ್ರಾ

ಮಾನವ ಸಮಾಜ ನಾಚಿಕೆಯಿಂದ ತಲೆತಗ್ಗಿಸುತ್ತಿದೆ. ಮಾನವರನ್ನು ಪ್ರೀತಿಸುವ ಪ್ರತಿಯೊಬ್ಬರೂ ಹೇಳಿಕೊಳ್ಳಲಾಗದ ಸಂಕಟದಿಂದ ನರಳುತ್ತಿದ್ದಾರೆ. ಪ್ರಜ್ಞಾವಂತರ ಮನಸ್ಸು ಹೇಳಿಕೊಳ್ಳಲಾರದ ತಳಮಳದಲ್ಲಿ ನರಳುತ್ತಿದೆ. ಜಗತ್ತಿನ ಇತಿಹಾಸದ ಪುಟಗಳಲ್ಲಿ ನಡೆದ ಭೀಕರ ಚಿತ್ರ ವಿಚಿತ್ರ ಹಿಂಸೆಯಿಂದ ಮಾನವ ಬುದ್ಧಿಕಲಿತಂತೆ ಕಾಣುತ್ತಿಲ್ಲ. ಸಾವಿರಾರು ವರ್ಷಗಳಿಂದ ಮಾನವ ಸಮಾಜ ವಿಕೃತ ಮನಸ್ಸಿನ ಹಿಂಸಾಚಾರದಿಂದ ತೀವ್ರವಾಗಿ ನರಳಿರುವುದನ್ನು ನಾವು ನೋಡಿದ್ದೇವೆ. ಯುದ್ಧದ ನೆಪದಲ್ಲಿ, ಧರ್ಮದ ವಿಚಾರದಲ್ಲಿ, ಜನಾಂಗದ ದ್ವೇಷದಲ್ಲಿ ಮಾನವ ಕೋಟಿ ನಿರಂತರವಾಗಿ ನರಳಿದೆ. ಕೋಟಿ ಕೋಟಿ ಮಾನವ ಜೀವಿಗಳು ಅಸ್ವಾಭಾವಿಕವಾಗಿ ಸಾವನ್ನಪ್ಪಿದ್ದಾರೆ, ಮಹಿಳೆಯರು ಮತ್ತು ಮಕ್ಕಳು ಸಾಮಾನ್ಯ ಮನುಷ್ಯರು ಕಂಡು ಕೇಳರಿಯದ ಹಿಂಸೆಯಿಂದ ನರಳಿದ್ದಾರೆ

ನಾನು ಇದರಲ್ಲಿ ಬರೆಯಲು ಹೋಗುತ್ತಿರುವುದು ಇತ್ತೀಚೆಗೆ ಗುಜರಾತ್ ರಾಜ್ಯದಲ್ಲಿ ನಡೆದ ಭೀಕರ ಹಿಂಸಾಚಾರದ ಬಗ್ಗೆ. ಮಾನವನ ಇತಿಹಾಸದ ಪುಟಗಳಲ್ಲಿ ಹಿಂದೆಂದೂ ಕೇಳರಿಯದ ಭೀಕರ ವಿಕೃತ ಹಿಂಸಾಚಾರದ ಬಗ್ಗೆ. ನಾವೆಲ್ಲಾ ದಿನನಿತ್ಯ ನೋಡುತ್ತಿದ್ದೇವೆ. ನಾಗರೀಕತೆಯ ತುಟ್ಟತುದಿಯಲ್ಲಿರುವ ನಾವು ಪ್ರಜಾಪ್ರಭುತ್ವದ ನಾಗರೀಕ ಹಕ್ಕುಗಳನ್ನು ಗರಿಷ್ಟ ಮಟ್ಟದಲ್ಲಿ ಪಡೆದುಕೊಳ್ಳುತ್ತಿರುವ ನಮ್ಮ ಸಮಾಜ ಅದನ್ನೇ ಹಿಂಸಾಚಾರಕ್ಕೆ ಬಳಸಿಕೊಳ್ಳುತ್ತಿರುವುದು ತೀವ್ರ ವಿಷಾದದ ಸಂಗತಿ.

ಧರ್ಮವು ಈ ಜಗತ್ತಿನ ಸಾಮಾನ್ಯ ಜನರನ್ನು ನಿರಂತರವಾಗಿ ಶೋಷಣೆ ಮಾಡುತ್ತಲೇ ಬಂದಿದೆ. ಪ್ರತಿಯೊಂದು ಧರ್ಮವೂ ಅದರಲ್ಲಿರುವ ಕೆಲವೇ ಕೆಲವು ಪುರೋಹಿತ ಶಾಹಿಗಳ ಹಿತರಕ್ಷಣೆಗಾಗಿಯೇ ಹುಟ್ಟಿಕೊಂಡು ಅಸಹಾಯಕ ಶ್ರಮ ಜೀವಿ ವರ್ಗವನ್ನು ನಿರಂತರವಾಗಿ ಶೋಷಿಸುತ್ತಲೇ ಬಂದಿದೆ. ನೂರಾರು ವರ್ಷಗಳಿಂದ ಉಂಟಾದ ಕ್ರಾಂತಿಕಾರಿ ಬದಲಾವಣೆಯಿಂದ ಜನರು ಧರ್ಮದಿಂದ ಹೊರತಾದ ಜೀವನವನ್ನು ನಡೆಸಲು ಪ್ರಾರಂಭಿಸಿದರು. ಧರ್ಮವನ್ನು ನಿಧಾನವಾಗಿ ಧಿಕ್ಕರಿಸಲಾರಂಭಿಸಿದರು. ರಾಜ್ಯದ ಆಡಳಿತಗಳಿಂದ ಧಾರ್ಮಿಕ ಮುಖಂಡರನ್ನು ಹೊರಗಿಡಲಾಯಿತು. ನಿಧಾನವಾಗಿ ಜನ ಧಾರ್ಮಿಕ ಮುಖಂಡರಿಗೆ ಹೆಚ್ಚಿನ ಮಹತ್ವಕೊಡುವುದನ್ನು ನಿಲ್ಲಿಸಿದರು. ಇದರಿಂದ ಈ ವಿಕೃತ ಮನಸ್ಸಿನ ಕಪಟ ಸಾಧು, ಸಂತರು, ಹೆದರಿದರು. ಸಾಧು ಸಂತರ, ಧಾರ್ಮಿಕ ಮುಖಂಡರ ಸುಖಮಯ ಜೀವನಕ್ಕೆ ಮುಳ್ಳಾಗಲಾರಂಭಿಸಿತು ಇದರಿಂದಾಗಿಯೇ ಈ ಕಪಟ ಜನ ಇಂದು ಜನರ ಮಧ್ಯೆ ಒಡಕನ್ನುಂಟುಮಾಡಿ, ಅದರಿಂದ ತಮ್ಮ ಬದುಕನ್ನು ಸುಖ

ಮುಳುಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಅವುಗಳ ಒಂದು ಭಾಗವೇ ಇಂದು ಜಗತ್ತಿನ ಎಲ್ಲೆಡೆ ಮತ್ತೆ ತಲೆ ಎತ್ತಿರುವ ಮೂಲಭೂತವಾದ ಮತ್ತು ಹಿಂಸೆ.

ಸಾವಿರಾರು ವರ್ಷಗಳಿಂದ ಶ್ರೇಷ್ಠತೆ ಮತ್ತು ಮಹತ್ವತೆಯ ಆಧಾರದಲ್ಲಿ ಹಿಂಸೆ ನಡೆಸಿದ ಬಹುತೇಕ ಮಂದಿ ನಾಯಕರು ಮತ್ತು ಸಾಧು ಸಂತರು ಸಾಮಾನ್ಯ ಜನರ ಮಾರಣಹೋಮ ನಡೆಸುತ್ತಾ ಬಂದಿದ್ದಾರೆ. ಯಾವುದೋ ಒಂದು ಸಿದ್ಧಾಂತ ಮತ್ತು ತತ್ವಗಳೇ ಶ್ರೇಷ್ಠ, ಅವುಗಳಿಗೆ ಪರ್ಯಾಯವೆಂಬುದಿಲ್ಲ ಎಂದು ಅದರ ಪ್ರತಿಪಾದಕರೇ ಭಾವಿಸುತ್ತಾರೋ ಆಗ ಅವುಗಳನ್ನು ವಿರೋಧಿಸುವವರ ಭೀಕರ ಕಗ್ಗೊಲೆಗಳು ನಡೆಯುತ್ತವೆ. ಅದು ಹಿಟ್ಲರ್ ಇರಬಹುದು. ಪೋಲ್ ಪಾಟ್, ಇರಬಹುದು. ಇದಿ ಅಮೀನ್ ಅಥವಾ ಬಿನ್ ಲಾಡನ್ ಆಗಿರಬಹುದು. ಅವರೆಲ್ಲರೂ ತಮ್ಮ ಸಿದ್ಧಾಂತ ಪ್ರತಿಪಾದನೆಗಾಗಿ ಸಾಮಾನ್ಯ ಜನರ ಮತ್ತು ಅಸಹಾಯಕರ ಭೀಕರ ನರಮೇಧ ನಡೆಸಿದ್ದಾರೆ. ರಕ್ತದ ಕೋಡಿಯನ್ನೇ ಹರಿಸಿದ್ದಾರೆ. ಮಹಿಳೆಯರ ಮತ್ತು ಮಕ್ಕಳ ಮೇಲೆ ಭೀಕರ ದೌರ್ಜನ್ಯ ಎಸಗಿದ್ದಾರೆ, ಈಗ ಗುಜರಾತಿನಲ್ಲಿ ನಡೆಯುತ್ತಿರುವುದು ಅವುಗಳ ಒಂದು ಮುಂದುವರೆದ ಭಾಗವಾಗಿದೆ. ಪ್ರಜ್ಞಾವಂತರಾಗಿರುವ ನಾವು. ಎಲ್ಲರನ್ನೂ ಸಮಾನತೆಯಿಂದ ಕಾಣಬೇಕೆಂಬುವ ನಮ್ಮ ಸಮಾಜದಲ್ಲಿ ಗುಜರಾತಿನಂತಹ ಘಟನೆ ನಮ್ಮೊಳಗಿದ್ದ ವಿಕೃತತೆಯನ್ನು ತೋರಿಸುತ್ತದೆ, ನಮ್ಮೊಳಗೆಯೇ ಇದ್ದ ಪೈಶಾಚಿಕತೆಯಿಂದು ಈ ಭೀಕರ ನರಮೇಧದ ಮೂಲಕ ಹೊರಬಂದಿದೆ. ಗುಜರಾತಿಗೆ ಭೇಟಿ ನೀಡಿದವರ ಮತ್ತು ಪ್ರತ್ಯಕ್ಷ ದರ್ಶಿಗಳ ಪ್ರಕಾರ ಅಲ್ಲಿ ನಡೆದ ಹಿಂಸೆಯನ್ನು ವರ್ಣಿಸಲು, ವಿವರಿಸಲು, ನಮಗೆ ಪದಗಳೇ ದೊರಕುತ್ತಿಲ್ಲ. ೧೨ ರಿಂದ ೨೫ ವರ್ಷದೊಳಗಿನ ನೂರಾರು ಹೆಣ್ಣುಮಕ್ಕಳನ್ನು ಸಾರ್ವಜನಿಕವಾಗಿಯೇ ಬೆತ್ತಲೆಗೊಳಿಸಿ, ನಡುರಸ್ತೆಯಲ್ಲಿ ಹಾಡು ಹಗಲೇ ಅತ್ಯಾಚಾರ ನಡೆಸಿ, ಗುಪ್ತಾಂಗಗಳನ್ನು ಸೀಳಿ, ಹೊಟ್ಟೆಯನ್ನು ಬಗೆದು. ಚೂರಿಯಿಂದ ಚುಚ್ಚಿ ಅಂಗಾಂಗಗಳನ್ನು ಛಿದ್ರಗೊಳಿಸಿ, ಪೆಟ್ರೋಲ್ ಸುರಿದು. ಬೆಂಕಿ ಹಚ್ಚಿ ಕೊಲ್ಲಲಾಯಿತು. ಅತ್ಯಾಚಾರಿಗಳಿಗೆ ಬಾಣಂತಿಯರು, ಗರ್ಭಿಣಿಯರು. ಮುದುಕಿಯರು ಎಲ್ಲರೂ ಬಲಿಯಾದರು, ಶವಗಳ ಮೇಲೆಯೇ ಅತ್ಯಾಚಾರ ನಡೆಯಿತು. ಗರ್ಭಿಣಿ ಮಹಿಳೆಯೋರ್ವಳ ಹೊಟ್ಟೆ ಬಗೆದು ಭ್ರೂಣವನ್ನು ಕತ್ತರಿಸಿ ಬೆಂಕಿಗೆ ಎಸೆಯಲಾಯಿತು: ೧೩ ವರ್ಷದ ಹೆಣ್ಣು ಮಗಳೊಬ್ಬಳಿಗೆ ಕಬ್ಬಿಣದ ರಾಡು ಚುಚ್ಚಿ ರಕ್ತ ಸುರಿಯುತ್ತಿದ್ದಂತೆಯೇ ಅತ್ಯಾಚಾರ ಮಾಡಲಾಯಿತು. ಮತ್ತೊಬ್ಬ ಹೆಣ್ಣುಮಗಳ ಹೊಟ್ಟೆಗೆ ಚೂರಿ ಹಾಕಿ ಸಾವಿಗೆ ಜಾರುತ್ತಿರುವಾಗಲೇ ಅತ್ಯಾಚಾರ ಮಾಡಲಾಯಿತು.

ನೂರಾರು ಮಕ್ಕಳನ್ನು ಅವರ ತಾಯಿಯ ಎದುರೇ ಅತ್ಯಾಚಾರ ಮಾಡಿ ಸಾಯಿಸಲಾಯಿತು. ಹೆಣ್ಣು ಮಕ್ಕಳು ತಮ್ಮ ಹೆತ್ತವರ ಎದುರಲ್ಲೇ ಸಾಮೂಹಿಕ

ಅತ್ಯಾಚಾರಕೊಳ್ಳಪಟ್ಟು ಸುಟ್ಟುಹೋದರು. ನೂರಾರು ಎಳೆಮಕ್ಕಳನ್ನು ಕತ್ತರಿಸಿ ಪೆಟ್ರೋಲ್ ಸುರಿದು ಸುಟ್ಟು ಹಾಕಿದರು. ೭೫ ವರ್ಷ ವಯಸ್ಸಿನ ವೃದ್ಧೆಯೊಬ್ಬಳನ್ನು ಆಕೆಯ ಮೊಮ್ಮಕ್ಕಳ ವಯಸ್ಸಿನ ಯುವಕರು ಬಲಾತ್ಕಾರ ಮಾಡಿದರು. ಬಾಣಂತಿ ಹೆಂಗಸೊಬ್ಬಳ ಮೂರು ತಿಂಗಳ ಮಗಳನ್ನು ಕಲ್ಲು ಹೊಡೆದು ಕೊಲೆ ಮಾಡಿದರು. ಅವಳನ್ನು ಸಾಮೂಹಿಕ ಅತ್ಯಾಚಾರಕೊಳ್ಳಪಡಿಸಿದರು. ಆಕೆ ಇಂದು ಬದುಕುಳಿದಿದ್ದು. ಪರಿಹಾರ ಶಿಬಿರವೊಂದರಲ್ಲಿ ಆಶ್ರಯ ಪಡೆದಿದ್ದಾಳೆ. ಇಂತಹ ಭೀಕರ ಹಿಂಸೆಯನ್ನು ಮನುಷ್ಯರು ಮಾತ್ರ ಮಾಡಲು ಸಾಧ್ಯವೇ ಇಲ್ಲ. ಈ ಕೃತ್ಯಗಳನ್ನು ನಡೆಸಿದವರು ನಿಜಕ್ಕೂ ರಾಕ್ಷಸರು ಇಲ್ಲಾ ಪಿಶಾಚಿಗಳಾಗಿರಬೇಕು. ಹೆಣ್ಣು ಮಕ್ಕಳನ್ನು ನಡುರಸ್ತೆಯಲ್ಲೇ ಸಾವಿರಾರು ಜನರ ಮಧ್ಯ ಬೆತ್ತಲೇಗೊಳಿಸದ್ದಲ್ಲದೇ ತಾವೂ ಕೂಡ ಬೆತ್ತಲೆಗೊಂಡದ್ದನ್ನು ನೆನಸಿದಾಗ ಈ ಜನರ ಭೀಕರ ವಿಕೃತ, ಪೈಶಾಸಿಕ ಮನಸ್ಸನ್ನು ನಾವು ಅರ್ಥಮಾಡಿಕೊಳ್ಳಬಹುದು. ದುಷ್ಟ ಜನರನ್ನು ಸಂಹರಿಸಲು ಸಹಾಯವಾಗಬೇಕಾಗಿದ್ದ ತ್ರಿಶೂಲಗಳು ಇಂದು ಅಸಹಾಯಕ ಮಹಿಳೆಯರ, ಮಕ್ಕಳ ಗುಪ್ತಾಂಗಗಳನ್ನು ಸೀಳಲು ಬಳಕೆಯಾಗಿವೆ. ಇಂತಹ ತ್ರಿಶೂಲಗಳು ಧಾರ್ಮಿಕ ಹತ್ಯಾರಗಳು ನಮ್ಮ ನಡುವೆ ಇರುವುದಾದರೂ ಏಕೆ? ಇಂತಹ ಹಿಂಸೆಗಳು ಯಾವ ಕಾರಣಕ್ಕಾಗಿ ನಡೆದರೂ ಅದರಲ್ಲಿ ಮೊದಲು ಬವಣೆ ಪಡುವವರು ಮಹಿಳೆಯರೇ ಆಗಿರುತ್ತಾರೆ. ಅಸಹಾಯಕರಾದ ಹೆಣ್ಣು ಮಕ್ಕಳು ಮತ್ತು ಮುಗ್ಧ ಮಕ್ಕಳು ಲೈಂಗಿಕ ಹಿಂಸೆಗೆ ಗುರಿಯಾಗುತ್ತಾರೆ. ನಂತರ ಸಾಯಿಸಲ್ಪಡುತ್ತಾರೆ. ಅಲ್ಲಿ ಅವರ ಸಹಾಯಕ್ಕಾಗಿ ತಂದೆ, ಅಣ್ಣ, ತಮ್ಮ, ಸ್ನೇಹಿತರು ಯಾರೂ ಬರುವುದಿಲ್ಲ. ಈ ರೀತಿಯ ಹಿಂಸೆಗೊಳಗಾದವರ ಮನಸ್ಸು ತೀವ್ರ ಅನಾಥ ಪ್ರಜ್ಞೆಯಿಂದ ಕಾಡುತ್ತದೆ, ತಮ್ಮ ರಕ್ಷಣೆ ಮಾಡುವರೆಂದು ನಂಬಿದ್ದ ಪೋಲೀಸರೇ ಅತ್ಯಾಚಾರಿಗಳೊಡನೆ ಸೇರಿದಾಗ, ತಮ್ಮ ನಾಯಕರೆಂದು ನಂಬಿದ್ದ ಜನರೇ ಅತ್ಯಚಾರಿಗಳಾದಾಗ ಜನರಲ್ಲಿ ಇನ್ನಿಲ್ಲದ ತೀವ್ರತರವಾದ ಭಯ ಆವರಿಸುತ್ತವೆ. ಇಂದು ಆ ರಾಜ್ಯದ ಲಕ್ಷಾಂತರ ಹೆಣ್ಣು ಮಕ್ಕಳು ಭೀಕರವಾದ ಭಯದಿಂದ ನರಳುತ್ತಿದ್ದಾರೆ. ಯಾವಾಗ ತಮ್ಮ ದೇಹವನ್ನು ವಿಕೃತರು ಹರಿದು ತಿನ್ನುತ್ತಾರೋ ಎಂದು ಭಯಭೀತರಾಗಿದ್ದಾರೆ. ಬಹುಶಃ ಇದು ದೇಶದ ಉಳಿದ ಭಾಗದ ಹೆಣ್ಣು ಮಕ್ಕಳನ್ನೂ ಕಾಡುತ್ತಿರಬಹುದು.

ಇಂತಹ ಭೀಕರ ಹಿಂಸೆಗೆ ಪ್ರಚೋದನೆ ನೀಡುವ, ಹಿಂಸೆ ನಡೆಸುವ ಧರ್ಮಗಳು ಮತ್ತು ಸಾಧು ಸಂತರು ನಮಗೆ ಬೇಕಾಗಿದ್ದಾರೆಯೇ ಎಂಬುದನ್ನು ನಾವು ಯೋಚಿಸಬೇಕಾಗಿದೆ. ಎಂದೋ ಒಂದು ಕಾಲದಲ್ಲಿ ಬದುಕಿದ್ದ ಯಾರೋ ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಇಂತಹ ಭೀಕರ, ಬಿಭೀತ್ಸ ಹಿಂಸೆ ನಡೆಯುವುದನ್ನು ನಾವು ಅತ್ಯಂತ ಪ್ರಬಲವಾಗಿ ವಿರೋಧಿಸಬೇಕಾಗಿದೆ. ವೈರಿಗಳಿಗೆ ಅನುಕೂಲವಾಗಿರುವ

ಧರ್ಮವನ್ನು ಧಾರ್ಮಿಕ ಆಚರಣೆಗಳನ್ನು ಕಿತ್ತೊಗೆಯಬೇಕಾಗಿದೆ. ಪ್ರಜ್ಞಾವಂತ ನಾಗರಿಕ ಸಮಾಜದಲ್ಲಿ ಧಾರ್ಮಿಕ ಮೂಲಭೂತವಾದವೆಂಬುದು ಇಂದು ಬ್ರಹ್ಮರಾಕ್ಷಸನಂತೆ ವಿಜೃಂಭಿಸುತ್ತಿದೆ. ಇದರಲ್ಲಿ ರಾಜಕೀಯ ನಾಯಕರು, ಸರಕಾರಿ ಅಧಿಕಾರಿಗಳು ಸೇರಿಕೊಂಡಾಗ ಎಂತಹ ವಿಪ್ಲವಗಳು ಸಂಭವಿಸುತ್ತವೆ ಎಂಬುದಕ್ಕೆ ಗುಜರಾತಿನ ಘಟನೆಗಳೇ ಸಾಕ್ಷಿಯಾಗಿವೆ. ಸಮಾಜದಲ್ಲಿ ಪ್ರಜ್ಞಾವಂತ ನಾಗರಿಕರನ್ನು ಸೃಷ್ಟಿಸಬೇಕಾದ ಶಾಲೆಗಳು ಮತ್ತು ಪಾಠಶಾಲೆಗಳು ಧಾರ್ಮಿಕ ಪಂಥಗಳ ಕೈಗೆ ಹೋದಾಗ ಮೂಲಭೂತವಾದಗಳು ಪ್ರಬಲವಾಗುತ್ತವೆ. ಇಂದು ಈ ದೇಶದ ಮಠಗಳು ಮಸೀದಿಗಳು, ಚರ್ಚ್ ಮಿಷನರಿಗಳು ನಡೆಸುತ್ತಿರುವ ವಿದ್ಯಾ ಕೇಂದ್ರಗಳನ್ನು ಸರಕಾರವೇ ನಡೆಸಬೇಕಾಗಿದೆ. ಧಾರ್ಮಿಕ ಮುಖಂಡರ ಮೇಲೆ ಪ್ರಜ್ಞಾವಂತ ನಾಗರಿಕರು ಹದ್ದಿನ ಕಣ್ಣಿಟ್ಟು ಕಾಯಬೇಕಾಗಿದೆ. ಅವರ ಆವೇಶ ಭರಿತ ಬೇರೆಯವರ ಮೇಲಿನ ದ್ವೇಷದ ವಿಚಾರಗಳನ್ನು ಬಹಿಸ್ಕರಿಸಬೇಕಾಗಿದೆ. ಈ ದೇಶದ ಜನರು ಧಾರ್ಮಿಕ ನಾಯಕರನ್ನು ರಾಜಕೀಯದಿಂದ ದೂರವಿಟ್ಟಾಗ, ಮೃಗಳ್ಳರಾದ ಧಾರ್ಮಿಕ ಮುಖಂಡರನ್ನು ಒದ್ದೋಡಿಸಿದಾಗ, ಅವರ ಕಾಲಿಗೆ ಬೀಳುವುದನ್ನು ನಿಲ್ಲಿಸಿದಾಗ ಮಾತ್ರ ಈ ದೇಶದಲ್ಲಿ ಒಂದು ಸುಂದರ ಸಮತಾ ರಾಜ್ಯವನ್ನು ಸ್ಥಾಪನೆ ಮಾಡಲು ಸಾಧ್ಯವಾಗುತ್ತದೆ. ★

– ಎನ್. ಎ. ಮುತ್ತಪ್ಪ

ಸಾಲದ ಶೂಲ

ಈ ದೇಶದಲ್ಲಿ ಮಾತ್ರ ಹೀಗಾಗ್ಲಿಕ್ಕೆ ಸಾಧ್ಯ. ಏನು ಅಂತಿರಾ? ಇಲ್ಲಿ ನೀರಿನ ಬೆಲೆಯೇ ಪೆಟ್ರೋಲ್‌ಗಿಂತ ತುಟ್ಟಿ. ಹೇಗೆ ಅಂತೀರಾ? ತುಂಬಾ ಸರಳ. ನೀರಿಗೆ ಕಾರ್ಬನ್ ಡೈ ಆಕ್ಸೈಡನ್ನು ಬೆರೆಸಿ ತಯಾರಿಸುವ ಪೇಯ ಈ ಪೆಪ್ಸಿ ಮತ್ತು ಕೋಕ್. ಅವು ಮುನ್ನೂರು ಮಿಲಿಗೆ ಹನ್ನೆರಡು ರೂ. ನಂತೆ ಮಾರಾಟವಾಗುತ್ತದೆ. ಅಂದರೆ ಕೆಜಿಗೆ ಸುಮಾರು ನಲವತ್ತು ರೂ. ಗಳಾದವು. ಆದರೆ ಅಷ್ಟೇ ಪ್ರಮಾಣದ ಪೆಟ್ರೋಲ್ ಬೆಲೆ ಬರಿ ಮೂವತ್ತೈದು ರೂ.!...ಆಮ್ಲಜನಕವನ್ನು ಸೇವಿಸಿ, ಕಾರ್ಬನ್ ಡೈ ಆಕ್ಸೈಡನ್ನು ದೇಹದಿಂದ ಹೊರಹಾಕಬೇಕೆಂಬುದನ್ನು ಚಿಕ್ಕಂದಿನಿಂದಲೇ ಕಲಿತಿದ್ದರೂ, ಕಾರ್ಬನ್ ಕಾರ್ಬನ್ ಡೈ ಆಕ್ಸೈಡನ್ನು ಬೆರೆಸಿರುವ ನೀರನ್ನೇ ಗಟಗಟ ಕುಡಿಯುವ ನಮ್ಮ ಜನರಿಗೆ ಈ ವಿಷಯವೂ ಮಾಮೂಲಿಯಾಗಿ ಕಂಡಿತೇನೋ...!

ಇಲ್ಲಿ ಎಲ್ಲವೂ ಹೀಗೆಯೇ. ಇಂತಹ ವಿರೋಧಾಭಾಸಗಳ ನಡುವೆಯೇ ಭಾರತದ ಸೌಧ ಕಟ್ಟಲಾಗುತ್ತಿದೆ, ಸಾಲ ಪಡೆದೂ ಪಡೆದೂ ವಿಕಾಸದ ಕನಸು ತೋರಿಸಲಾಗುತ್ತಿದೆ. ಸಾಲ ತೀರಿಸುವುದಿರಲಿ ಬಡ್ಡಿ ಕಟ್ಟಲೂ ಪರದಾಡುತ್ತಿದ್ದೇವೆ.

ನಮ್ಮ ದೇಶದ ಆದಾಯ ಒಂದು ಲಕ್ಷ ಹತ್ತು ಸಾವಿರ ಕೋಟಿ. ಅದರಲ್ಲಿ ಅರವತ್ತು ಸಾವಿರ ಕೋಟಿ ರೂ. ಬಡ್ಡಿ ತೀರಿಸಲಿಕ್ಕೆಂದೇ ಖರ್ಚಾಗುತ್ತಿದೆ. ರಕ್ಷಣಾ ಇಲಾಖೆಗೆಂದು ಇಪ್ಪತ್ತೆರಡು ಸಾವಿರ ಕೋಟಿ ಮೀಸಲಿಟ್ಟರೆ, ಸರಕಾರಿ ನೌಕರರ ಸಂಬಳ, ಪಿಂಚಣಿಗೆಂದೇ ಸುಮಾರು ಮೂವತ್ತು ಸಾವಿರ ಕೋಟಿ ! ದೇಶದ ಅಭಿವೃದ್ಧಿ ಕಾರ್ಯಗಳಿಗೆಂದು ಉಳಿದದ್ದು ಕೇವಲ ಏಳೆಂಟು ಸಾವಿರ ಕೋಟಿಗಳಷ್ಟೆ. ಹೀಗಾಗಿ ದೇಶದ ಅಭಿವೃದ್ಧಿಗೆ ಸಾಲ ತರುವುದು ಅನಿವಾರ್ಯವಾಗುತ್ತದೆ. ಹೀಗೆ, ಸಾಲ ಪಡೆದು ವಿಕಾಸವಾಯಿತೆನ್ನುವುದು ಎಷ್ಟು ಮೂರ್ಖತನ..! ಅದಕ್ಕೂ ಹೆಚ್ಚಿನ ನಾಚಿಕೆಯ ವಿಷಯವೆಂದರೆ, ವಿಶ್ವಬ್ಯಾಂಕ್ ಮತ್ತು ಐಎಂಎಫ್ ಭಾರತಕ್ಕೆ ಸಾಲ ನೀಡಿದಾಗಲೆಲ್ಲ ನಮ್ಮ ಪತ್ರಿಕೆಗಳು ಹಾಡಿ ಹೊಗಳುತ್ತವೆ; ಪಾರ್ಲಿಮೆಂಟ್‌ನಲ್ಲಿ ಚಪ್ಪಾಳೆ ಹೊಡೆದು ಕುಣಿಯಲಾಗುತ್ತದೆ. ಐವತ್ತು ಪೈಸೆ ಕೇಳುವ ಭಿಕ್ಷುಕನನ್ನು ಬೈದು ಜೈಲಿಗೆ ಅಟ್ಟುತ್ತೇವೆ. ಆದರೆ ಕೋಟಿಗಟ್ಟಲೆ ಭಿಕ್ಷೆ ಬೇಡುವ ಈ ಮಹಾಶಯರನ್ನು ಅಟ್ಟುವುದು ಎಲ್ಲಿಗೆ?

ಈ ರೀತಿ ಸಾಲದ ಸುಳಿಯಲ್ಲಿ ಸಿಕ್ಕ ಮೆಕ್ಸಿಕೊ, ಬ್ರೆಜಿಲ್, ಕೊಲಂಬಿಯಾ ಹಾಗೂ ಇಥಿಯೋಪಿಯಾಗಳು ದಿವಾಳಿಯಾಗಿ ಹೋದವು. ಇಥಿಯೋಪಿಯಾ ಮತ್ತು ಸೋಮಾಲಿಯಾಗಳಲ್ಲಂತೂ ಅಪಾರ ನೈಸರ್ಗಿಕ ಸಂಪನ್ಮೂಲವಿದ್ದರೂ ಕಿತ್ತುತಿನ್ನುವ ಹಸಿವಿನಿಂದ ಜನ, ಬಳಲುತ್ತಿದ್ದಾರೆ.

ಸಾಲ ಕೊಟ್ಟ ದೇಶಗಳ ಮುಂದೆ ಬಾಗಿ ನಿಲ್ಲುವ ಸ್ಥಿತಿ ಈಗಾಗಲೇ ನಮಗೊದಗಿದೆ. ಇನ್ನು ಮುಂದೆ ?

– ರಾಜೀವ್ ದೀಕ್ಷಿತ್

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ – ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/-ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/- ರೂ. ಗಳನ್ನಾಗಲೀ ನಿಮ್ಮ ಇಷ್ಟಾನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಮ್ರ ಕೋರಿಕೆ. – ಪ್ರಕಾಶಕರು

ಎಂ. ಎನ್. ರಾಯ್‌ಯವರ ವಿರುದ್ಧ ಕುಯುಕ್ತಿ
ಒಂದು ನಕಲಿ ಪತ್ರದ ಕಥೆ

– ಸಮರೇಶ್ ರಾಯ್

೧೯೧೬ ರಿಂದ ೧೯೩೦ ನೇ ಇಸ್ವಿವರೆಗೆ ಎಂ. ಎನ್. ರಾಯ್ ಯುರೋಪ್ ಖಂಡದಲ್ಲಿದ್ದರು. ಆ ಸಮಯದಲ್ಲಿ ಅವರು ಅಲ್ಲಿದ್ದುಕೊಂಡೇ ಭಾರತದಲ್ಲಿ ಕಮ್ಯೂನಿಸ್ಟ್ ಆಂದೋಲನವನ್ನು ಸಂಘಟಿಸುತ್ತಿದ್ದರೆಂಬ ಸಂಗತಿ ಅವರಲ್ಲಿ ವಸಾಹತುಶಾಯಿ ವಿರುದ್ಧ ಇದ್ದ ತೀವ್ರತಮ ಬಂಡಾಯದ ಮನೋಭಾವವನ್ನು ತೋರಿಸುತ್ತದೆ. ೧೫ ವರ್ಷಗಳಷ್ಟು ದೀರ್ಘ ಅವಧಿಯ ಎಂ. ಎನ್. ರಾಯರ ವಿದೇಶಗಳಲ್ಲಿಯ ಚಟುವಟಿಕೆಗಳ ಮೌಲ್ಯಮಾಪನವಾಗಬೇಕಾದರೆ ಅವರ ವಿರುದ್ಧ ಬ್ರಿಟಿಷ್ ಗೂಢಚಾರರು ಹೆಣೆದಿದ್ದ ಮಿಥ್ಯಾರೋಪ ಮತ್ತು ಒಳಸಂಚುಗಳ ಕಾರಣಗಳನ್ನು ಅಧ್ಯಯನ ಮಾಡದೆ ಸಾಧ್ಯವಿಲ್ಲ. ಹಾಗೆ ತಟಸ್ಥ ಮನೋಭಾವದಿಂದ ಅಧ್ಯಯನ ಮಾಡದೆ ಇದ್ದರೆ ರಾಯ್‌ರವರ ಚಟುವಟಿಕೆಗಳ ಬಗ್ಗೆ ಯಾವುದೇ ಅಲ್ಲಸಲ್ಲದ ಊಹೆಯನ್ನು ಮಾಡಿ ಅವರ ನಿಷ್ಕಲಂಕ ಸಾರ್ವಜನಿಕ ಜೀವನಕ್ಕೆ ಕಳಂಕವನ್ನುಂಟುಮಾಡಬಹುದು. ೧೯ನೇ ಶತಮಾನದಲ್ಲಿ ರಾಜಕೀಯ ಕ್ಷೇತ್ರಕ್ಕೆ ಓರ್ವ ವಿಶಿಷ್ಟ ಚಿಂತಕನನ್ನು ಕಾಣಿಕೆಯಾಗಿ ಕೊಟ್ಟ ಕೀರ್ತಿ ಭಾರತದ್ದಾಗಿದೆ. ಸ್ವಾತಂತ್ರ್ಯದ ನಂತರ ಅತ್ಯಂತ ಉದಾಸೀನಕ್ಕೆ ಒಳಗಾಗಿರುವ ಭಾರತದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಎಂ. ಎನ್. ರಾಯ್ ಪ್ರಮುಖರಾಗಿದ್ದಾರೆ. ಆದ್ದರಿಂದ ಅವರು ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಮಾಡಿದ್ದ ಹೋರಾಟ ಮತ್ತು ಮಾನವತಾವಾದಿ ವಿಚಾರಗಳ ಗಂಭೀರವಾದ ಅಧ್ಯಯನ ಇಂದು ಅಗತ್ಯವಾಗಿದೆಯೆಂದು ಹೇಳಿದರೆ ತಪ್ಪಾಗಲಾರದು.

೯-೧೦ ವರ್ಷಗಳವರೆಗೆ ರಾಯ್ ಅವರ ಮೊದಲ ಪತ್ನಿ ಮತ್ತು ಸಹವರ್ತಿನಿಯಾಗಿ ಇದ್ದಂಥ ಇವಿಲಿನ್ ಟ್ರೆಂಟ್ ರಾಯ್ ವಿದೇಶದಲ್ಲಿ ಅನುಭವಿಸಿದ ಕಷ್ಟಗಳ ಬಗ್ಗೆ ಈ ರೀತಿ ಬರೆದಿದ್ದಾರೆ:–

"೧೯೨೦ ರಿಂದ ೩೦ರವರೆಗೆ ೧೦ ವರ್ಷಗಳಕಾಲ ರಾಯ್‌ರವರು ವಿದೇಶಗಳಲ್ಲಿ ರಾಜಕೀಯ ಭೂಗತ ವ್ಯಕ್ತಿಯಾಗಿ ಜೀವನ ನಡೆಸಿದರು. ಆ ಸಮಯದಲ್ಲಿ ಬ್ರಿಟಿಷ್ ಗುಪ್ತದಳದವರು ಅವರನ್ನು ಬೆನ್ನಟ್ಟಿಕೊಂಡೇ ಇದ್ದರು. ಅವರ ಬಂಧನಕ್ಕಾಗಿ ಯುರೋಪ್‌ಖಂಡದ ಎಲ್ಲ ದೇಶಗಳ ಎಲ್ಲ ರಾಜಧಾನಿಗಳಿಗೆ ವಾರಂಟ್ಸ್‌ಗಳನ್ನು ಕಳುಹಿಸಿದ್ದರು. ಕೊನೆಗೆ ೧೯೨೪ ರಲ್ಲಿ ಅವರನ್ನು ಫ್ರಾನ್ಸ್‌ನಲ್ಲಿ ಬಂಧಿಸಿ ಕೇವಲ ಒಂದು ಗಂಟೆಯ ಸೂಚನೆಕೊಟ್ಟು ಅವರನ್ನು ಆ ದೇಶದಿಂದ ಹೊರಗೆ ರವಾನಿಸಲಾಯಿತು. ರಾಯ್‌ರವರ ದೇಶಾಂತರದ

ಅವಧಿಯಲ್ಲೂ ಬ್ರಿಟಿಷ್ ಪೋಲಿಸರು ರಾಯ್‌ರವರನ್ನು ಶಾಂತಿಯಿಂದ ಇರಗೊಡಲಿಲ್ಲ. ಅವರನ್ನು ಹೆಜ್ಜೆ ಹೆಜ್ಜೆಗೂ ಬೆನ್ನು ಹತ್ತಿದ್ದರು. ಕ್ರಾಂತಿಕಾರಿ ಕೆಲಸದಲ್ಲಿ ತೊಡಗಿದ್ದ ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಹೆಸರುಗಳನ್ನು ಇಟ್ಟುಕೊಳ್ಳಬೇಕಾಯಿತು. ಕೊನೆಗೆ ನಾನು ಅವರೊಂದಿಗೆ ಯುರೋಪ್ ಖಂಡಕ್ಕೆ ಹೊರಟೆ."

೧೯೨೦ ರ ದಶಕಗಳಲ್ಲಿ ಇಂಗ್ಲೆಂಡ್ ವಿಶ್ವದ ಯಾವುದೇ ಸಾಮ್ರಾಜ್ಯಕ್ಕಿಂತ ದೊಡ್ಡದಾಗಿತ್ತು. ಆದರೆ ಈ ಸಾಮ್ರಾಜ್ಯವು ತನ್ನ ವಸಾಹತುಷಾಹಿ ನೀತಿಯ ಕಾರಣದಿಂದಾಗಿ ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಆಂದೋಲನದಿಂದ ಬಹು ಭೀತಿಗೊಂಡಿತು ಮತ್ತು ಕಮ್ಯೂನಿಸ್ಟರನ್ನು ತನ್ನ ಶತ್ರುವೆಂದೇ ಘೋಷಿಸಿತು. ಇಂಥ ಸಂದರ್ಭದಲ್ಲಿ ಕಮ್ಯೂನಿಸ್ಟ್ ಸಂಘಟನೆಯಲ್ಲಿ ಎಂ. ಎನ್. ರಾಯ್ ಬಹಳ ಪ್ರಮುಖವಾದ ಪಾತ್ರ ವಹಿಸಿದ್ದರೆಂಬುದು ಗಮನೀಯವಾಗಿದೆ. ಅವರು ಆ ಸಂಘಟನೆಯಲ್ಲಿ ಕೇವಲ ಒಬ್ಬ ಸದಸ್ಯನಾಗಿರದೆ ಆ ಸಂಘಟನೆಯ ನೀತಿ ನಿರೂಪರಾಗಿದ್ದರು. ಅಂಥ ಮಹತ್ವದ ಸ್ಥಾನದಲ್ಲಿದ್ದುಕೊಂಡು ಎಂ. ಎನ್. ರಾಯ್ ಬ್ರಿಟಿಷರ ಆಡಳಿತದಿಂದ ಎಲ್ಲ ದೇಶಗಳು ಬಿಡುಗಡೆಯಾಗಬೇಕೆಂಬ ನೀತಿಯನ್ನು ಕಮ್ಯೂನಿಸ್ಟ್ ಸಂಘಟನೆ ಅನುಸರಿಸಬೇಕೆಂದರು. ಈ ಕಾರಣದಿಂದಾಗಿ ಬ್ರಿಟಿಷ್ ಗುಪ್ತ ದಳದವರು ಎಂ. ಎನ್. ರಾಯ್ ಬೇರೆಲ್ಲ ಕ್ರಾಂತಿಕಾರರಿಂದ ಭಿನ್ನವಾದ ಮತ್ತು ಪ್ರಮುಖವಾದ ವ್ಯಕ್ತಿಯೆಂದು ಗುರುತಿಸಿತು ಮತ್ತು ಯಾವುದಾದರೂ ಕುತಂತ್ರದಿಂದ ಎಂ. ಎನ್. ರಾಯರ ವ್ಯಕ್ತಿತ್ವಕ್ಕೆ ಧಕ್ಕೆಯನ್ನುಂಟುಮಾಡಬೇಕೆಂದು ಮತ್ತು ಅವರಿಗೆ ಕಮ್ಯೂನಿಸ್ಟ್ ಸಂಘಟನೆಯಲ್ಲಿ ಅಗೌರವ ಉಂಟಾಗಬೇಕೆಂದು ಬ್ರಿಟಿಷರು ತೀರ್ಮಾನಿಸಿದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಭಾರತದಲ್ಲಿ ಯಾವ ಒಂದು ಗೌಪ್ಯಕರವಾದ ಪರಿಸ್ಥಿತಿಯಲ್ಲಿ ರಾಯ್ ಕೆಲಸ ಮಾಡಬೇಕಾಗಿ ಬಂತೋ ಆ ಕಾರಣದಿಂದಾಗಿ ಅವರ ಪ್ರಾಮಾಣಿಕತೆಯ ಬಗ್ಗೆ ಸಂಶಯ ಮೂಡುವಂಥ ಅನೇಕ ಬಗೆಯ ಗಾಳಿ ಸುದ್ದಿಗಳು ಹುಟ್ಟಲು ಕಾರಣವಾಯಿತು. ಇದೆಲ್ಲ ಪ್ರಾರಂಭವಾಗುವುದಕ್ಕೆ ಮುಖ್ಯ ಕಾರಣವೇನೆಂದರೆ ೧೯೨೦ ರಲ್ಲಿ ಕಮ್ಯೂನಿಸ್ಟ್ ಪಕ್ಷದ ಎರಡನೆಯ ಸಮ್ಮೇಳನ ನಡೆಯುವುದರಲ್ಲಿತ್ತು. ಆ ಸಮ್ಮೇಳನಕ್ಕೆ ಮುನ್ನ ಸೋವಿಯತ್ ರಷ್ಯಾದ ವಿದೇಶ ಮಂತ್ರಿಯಾಗಿದ್ದ ಚಿಚೆರಿನ್‌ರವರಿಗೆ ಒಂದು ಸಲಹೆಯನ್ನು ಕೊಡಲಾಯಿತು. ಭಾರತ ದೇಶದಲ್ಲಿ ಕ್ರಾಂತಿಯನ್ನು ಸಂಘಟಿಸಲು ಅನುಕೂಲವಾಗುವುದಕ್ಕಾಗಿ ಎಂ. ಎನ್. ರಾಯ್‌ರವರನ್ನು ಕಾಬೂಲ್‌ಗೆ ಸೋವಿಯತ್ ರಾಜದೂತನನ್ನಾಗಿ ಕಳುಹಿಸಬೇಕೆಂಬುದೇ ಆ ಸಲಹೆಯಾಗಿತ್ತು. ೧೯೦೧ ರಿಂದ ೧೯೦೬ರ ವರೆಗೆ ಭಾರತದ ವೈಸರಾಯ್‌ಯಾಗಿದ್ದ ಕರ್ಜನ್‌ರವರಿಗೆ ರಾಯ್‌ರವರ ಭೂಮಿಕೆ ಚೆನ್ನಾಗಿ

ಗೊತ್ತಿತ್ತು. ಬಂಗಾಲದ ಕ್ರಾಂತಿಯಲ್ಲಿಯ ರಾಯ್‌ರವರ ಪಾತ್ರದ ಬಗ್ಗೆ, ನಂತರ ಮೊದಲ ಮಹಾಯುದ್ಧದ ಸಮಯದಲ್ಲಿ ಅವರು ಮಾಡಲು ಪ್ರಯತ್ನಿಸಿದ್ದ ಬಂಡಾಯ ಇತ್ಯಾದಿಗಳ ಬಗ್ಗೆ ತಿಳಿದಿದ್ದ ಕರ್ಜನ್ ಸೋವಿಯತ್ ರಷ್ಯಾದೊಂದಿಗೆ ವಾಣಿಜ್ಯ ಒಪ್ಪಂದ ಮಾಡಿಕೊಳ್ಳಲು ಮುಂದೆ ಬಂದರು. ಆದ್ದರಿಂದ ಇಂಥ ಒಪಂದದ ಮಾತುಕತೆಯ ಸಮಯದಲ್ಲಿ ರಾಯ್‌ರವರನ್ನು ಕಾಬೂಲಿಗೆ ಕಳುಹಿಸುವು ದೆಂದರೆ ಬ್ರಿಟಿಷರನ್ನು ಕೆಣಕಿದಂತೆಯೇ ಸರಿ ಎಂದು ಭಾವಿಸಿ ಲೆನಿನ್ ರಾಯ್ ರವರನ್ನು ತಾಷ್‌ಕ್ಯಾಂಟ್‌ಗೆ ಕಳುಹಿಸಬೇಕೆಂದು ತೀರ್ಮಾನಿಸಿದ. ತಾಷ್‌ಕ್ಯಾಂಟಿನಲ್ಲಿ ರುವ ಮಿಲ್ಟ್ರಿ ಶಾಲೆಯ ಮುಖ್ಯಸ್ಥನಾಗಿಯೂ ಮತ್ತು ಟರ್ಕಿಯಲ್ಲಿ ಕಮ್ಯೂನಿಸ್ಟ್ ಪಕ್ಷದ ಮುಖ್ಯಸ್ಥನಾಗಿಯೂ ಕೆಲಸ ಮಾಡಬೇಕೆಂದು ಸೂಚಿಸಿದನು. ಮಿಲ್ಟ್ರಿಶಾಲೆಯಲ್ಲಿ ಭಾರತೀಯ ಕ್ರಾಂತಿಕಾರರನ್ನು ತರಬೇತಿಗೊಳಿಸಲಾಗುತ್ತಿತ್ತು. ೧೯೨೦ ಅಕ್ಟೋಬರ್‌ನಲ್ಲಿ ರಾಯ್‌ರವರ ನಾಯಕತ್ವದಲ್ಲಿ ಅನೇಕ ಜನ ಮೊಹಾಜಿದಿ ಗಳು ಸೇರಿ ಭಾರತ ಕಮ್ಯೂನಿಸ್ಟ್ ಪಕ್ಷವನ್ನು ಸ್ಥಾಪಿಸಿದರು.

೧೯೨೧ರಲ್ಲಿ ಇಂಗ್ಲೆಂಡ್ ಸೋವಿಯತ್ ರಷ್ಯಾದೊಂದಿಗೆ ವಾಣಿಜ್ಯ ಒಪ್ಪಂದಕ್ಕೆ ಸಹಿ ಹಾಕಿತು. ಈ ಒಪ್ಪಂದದಿಂದಾಗಿ ಸೋವಿಯತ್ ಅರ್ಥ ವ್ಯವಸ್ಥೆ ಸುಧಾರಿಸಿತು. ಆದರೆ ಈ ಒಪ್ಪಂದದಿಂದಾದ ಇನ್ನೊಂದು ಪರಿಣಾಮವೆಂದರೆ ತಾಷ್ ಕ್ಯಾಂಟಿ ನಲ್ಲಿದ್ದ ಮಿಲ್ಟ್ರಿ ಶಾಲೆಯನ್ನು ನಿಲ್ಲಿಸಬೇಕೆಂದು ಲೆನಿನ್ ಆದೇಶ ಮಾಡಿದ. ಅನಂತರ ಈ ಶಾಲೆಗೆ ಪರ್ಯಾಯವಾಗಿ ಕಮ್ಯೂನಿಸ್ಟ್ ಪಕ್ಷವು ಪೂರ್ವ ದಿಕ್ಕಿನಲ್ಲಿರುವ ದೇಶ ಗಳ ಕಾರ್ಮಿಕರ ಕಮ್ಯೂನಿಸ್ಟ್ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿತು. ಈ ವಿಶ್ವ ವಿದ್ಯಾನಿಲಯದ ಉದ್ದೇಶ ಪೂರ್ವ ಭಾಗದಲ್ಲಿಯ ದೇಶಗಳಲ್ಲಿಯ ಕಮ್ಯೂನಿಸ್ಟರನ್ನು ತರಬೇತಿಗೊಳಿಸುವುದು. ರಾಯ್‌ರವರನ್ನು ಈ ವಿಶ್ವವಿದ್ಯಾನಿಲಯದ ಮುಖ್ಯಸ್ಥ ನನ್ನಾಗಿ ನೇಮಿಸಲಾಯಿತು. ಅವರ ಹೆಂಡತಿ ಇವ್‌ಲಿನ್ ಆ ವಿದ್ಯಾಲಯದಲ್ಲಿ ಓರ್ವ ಪ್ರಮುಖ ಉಪನ್ಯಾಸಕಿಯಾದಳು. ವಿಯೆಟ್ನಾಂನ ಹೊಚಿಮಿನ್ ಮತ್ತು ಇಂಡೋನೇಷಿಯಾದ ಡಾ॥ ಮೊಹಮದ್ ಹಟ್ಟಾ ಆ ವಿಶ್ವವಿದ್ಯಾನಿಲಯದಲ್ಲಿ ಅಧ್ಯ ಯನ ಮಾಡಿದ ವಿದ್ಯಾರ್ಥಿಗಳು.

೧೯೨೦ರ ಶರತ್ಕಾಲದ ವೇಳೆಗೆ ಬ್ರಿಟಿಷರು ಎಂ. ಎನ್. ರಾಯ್‌ರವರನ್ನು ಓರ್ವ ತಲೆನೋವಿನ ವ್ಯಕ್ತಿಯೆಂದು ಭಾವಿಸಿದರು, ಏಕೆಂದರೆ ರಾಯ್‌ರವರಿಂದ ಪ್ರಶಿಕ್ಷಣ ಪಡೆದ ಕಮ್ಯೂನಿಸ್ಟರು ಇರಾನ್, ಆಫ್‌ಘಾನಿಸ್ತಾನ್, ಪಾಮೀರ್ ಮತ್ತು ಚಿತ್ರಾಲ್ ಮೂಲಕ ಭಾರತದಲ್ಲಿ ಬರಲು ಪ್ರಾರಂಭಿಸಿದರು. ಪಾಮೀರ್ ಮತ್ತು ಚಿತ್ರಾಲಿನಲ್ಲಿ ಜನಸಂದಣಿ ಇಲ್ಲದೇ ಇದ್ದುದರಿಂದ ಭಾರತಕ್ಕೆ ನುಸುಳಿ ಬರುತ್ತಿದ್ದ ಕಮ್ಯೂನಿಸ್ಟ್ ಕ್ರಾಂತಿಕಾರರನ್ನು ಬ್ರಿಟಿಷ್ ಪೋಲಿಸರು ಸುಲಭವಾಗಿ ಕಂಡು ಹಿಡಿಯಲು ಸಾಧ್ಯವಾಯಿತು. ಅವರಲ್ಲಿ ಕೆಲವರನ್ನು ಬಂಧಿಸಿದರು ಮತ್ತು

ಪೇಶಾವರ್‌ನಲ್ಲಿ ಮೂರು ಪ್ರಕಾರದ ಪಿತೂರಿಯ ವಿವಾದದಲ್ಲಿ ಅವರನ್ನು ವಿಚಾರಣೆಗೆ ಗುರಿಪಡಿಸಿದರು. ಆದರೆ ನಳಿನಿ ಗುಪ್ತಾ ಸಮುದ್ರ ಮಾರ್ಗವಾಗಿ ಭಾರತಕ್ಕೆ ಬಂದದ್ದರಿಂದ ಅವರು ಪೋಲಿಸರಿಂದ ತಪ್ಪಿಸಿಕೊಂಡರು. ನಂತರ ಅವರು ಕಲ್ಕತ್ತಾದಲ್ಲಿದ್ದ ಮುಜಫರ್ ಅಹಮದ್, ಮುಂಬೈಯಲ್ಲಿದ್ದ ಎಸ್. ಕೆ. ಡಾಂಗೆ, ಕಾನ್ಪುರದಲ್ಲಿದ್ದ ಹಜರತ್ ಮೊಹನಿ ಮತ್ತು ಇತರ ನಗರಗಳಲ್ಲಿದ್ದ ಕಮ್ಯೂನಿಸ್ಟ್‌ರನ್ನು ಭೇಟಿ ಮಾಡಿ ಮಾಸ್ಕೋಗೆ ಹಿಂದಿರುಗಿದರು. ನಳಿನಿ ಗುಪ್ತಾರವರ ಮೊದಲನೆಯ ಭೇಟಿ ಪತ್ತೆಯಾಗದೆ ಉಳಿಯಿತು. ನಂತರ ೧೯೨೨ ರಲ್ಲಿ ಅವರು ಪುನಃ ಭಾರತಕ್ಕೆ ಚಿತ್ತರಂಜನ್‌ದಾಸರನ್ನು ಭೇಟಿ ಮಾಡಲು ಬಂದರು. ಚಿತ್ತರಂಜನ್ ದಾಸ್ ಆ ವರ್ಷದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಚುನಾಯಿತ ಅಧ್ಯಕ್ಷರಾಗಿದ್ದರು. ನಳಿನಿ ಗುಪ್ತಾ ಚಿತ್ತರಂಜನ್‌ದಾಸ್‌ರವರಿಗೆ ಎಂ. ಎನ್. ರಾಯ್‌ರವರಿಂದ ಒಂದು ಸಂದೇಶ ಕೊಡಲು ತಂದಿದ್ದರು. ಆದರೆ ಆ ಪತ್ರದಲ್ಲಿದ್ದ ಸಂದೇಶ ಜೂರಿಚ್ ನಗರದಲ್ಲಿ ಬಹಿರಂಗಗೊಂಡುಬಿಟ್ಟಿತು. ಆ ಸುದ್ದಿ ಲಂಡನ್‌ಗೂ ತಲುಪಿತು. ಲಂಡನ್ನಿಂದ ಒಂದು ಸುದ್ದಿ ಸಂಸ್ಥೆಯು ಅದನ್ನು ಭಾರತಕ್ಕೆ ತಂತಿ ಮೂಲಕ ರವಾನಿಸಿತು. ಗಯಾದಲ್ಲಿ ಕಾಂಗ್ರೆಸ್ ಅಧಿವೇಶನ ಸೇರುವ ಮೊದಲ ದಿನ ಸುದ್ದಿ ಪತ್ರಿಕೆಗಳು ಅದನ್ನು ಪ್ರಕಟಿಸಿದವು. ಈ ಸುದ್ದಿ ಪ್ರಕಟನೆಯ ಹಿಂದೆ ಇದ್ದ ಉದ್ದೇಶ ಕಾಂಗ್ರೆಸ್ ಪ್ರತಿನಿಧಿಗಳಲ್ಲಿ ಭೀತಿಯನ್ನುಂಟುಮಾಡುವುದೇ ಆಗಿತ್ತು. ಸುಧಾರಣಾವಾದಿಯಾಗಿರುವ ಕಾಂಗ್ರೆಸ್ಸನ್ನು ಒಂದು ಕ್ರಾಂತಿಕಾರಿ ಸಂಘಟನೆಯನ್ನಾಗಿ ಪರಿವರ್ತಿಸಲಾಗುತ್ತದೆ ಎಂಬ ಸುದ್ದಿ ಪ್ರತಿನಿಧಿಗಳಲ್ಲಿ ಭೀತಿಯನ್ನುಂಟು ಮಾಡಿದ್ದು ಸಹಜವೇ ಆಗಿತ್ತು. ೧೯೧೫ ರಲ್ಲಿ ಎಂ. ಎನ್. ರಾಯ್ ಭಾರತದಿಂದ ತಪ್ಪಿಸಿಕೊಂಡು ಹೋದಾದ ಮೇಲೆ ಇದೇ ಮೊದಲ ಬಾರಿಗೆ ಭಾರತೀಯ ಪತ್ರಿಕೆಗಳಲ್ಲಿ ರಾಯ್‌ರವರ ಹೆಸರು ಪ್ರಕಟಗೊಂಡಿತ್ತು.

ಅಂದಿನಿಂದ ಬ್ರಿಟಿಷ್ ಗುಪ್ತದಳವು ರಾಯ್‌ರವರ ಚಟುವಟಿಕೆಗಳನ್ನು ಮೊಟಕುಗೊಳಿಸಲು ತನ್ನ ಜಾಲವನ್ನು ಬೀಸಿತು. ೧೯೨೦ ರ ದಶಕಗಳಲ್ಲಿ ಒಟ್ಟು ಳಳ ಜನರನ್ನು ಕಮ್ಯೂನಿಸ್ಟ್‌ರಾಗಿರುವುದಕ್ಕಾಗಿಯೂ ಮತ್ತು ರಾಯ್‌ರವರ ಏಜೆಂಟ್ಸ್‌ರಾಗಿರುವುದಕ್ಕಾಗಿಯೂ ಸೆರೆಮನೆಗೆ ಅಟ್ಟಿತು. ಸಂಘಟನೆಯ ಕಾರ್ಯಕ್ಕಾಗಿ ಕೊಟ್ಟಂಥ ಸೂಚನೆಗಳು ಮತ್ತು ಧನ ಸಹಾಯವನ್ನು ಮಾಡುವುದಾಗಿ ಹೇಳಿದ ಮಾತುಗಳು ಇರುವಂಥ ಎಂ. ಎನ್. ರಾಯ್‌ರವರ ಕಾಗದಗಳನ್ನು ಪೋಲಿಸರು ಮಧ್ಯ ಮಾರ್ಗದಲ್ಲಿಯೇ ತಡೆ ಹಿಡಿದರು. ಈ ಕಾಗದಗಳನ್ನು ರಾಯ್‌ರವರ ತಮ್ಮ ನಿಕಟವರ್ತಿಯಾಗಿದ್ದ ಸೆಪಾಸಿ ಅವರಿಗೆ ಬರೆದಿದ್ದರು. ಪೋಲಿಸರು ಈ ಪತ್ರಗಳಲ್ಲಿಯ ವಿಷಯವನ್ನು ತಿರುಚಿದರು. ಈ ವಿಷಯವಾಗಿ ಕ್ಯಾಲಿಫೋರ್ನಿಯ ಯೂನಿವರ್ಸಿಟಿಯ ಜೇನ್ ಡಿ-ಓವರ್, ಸ್ಮಿತ್ ಮತ್ತು ಆ ಮಾರ್ಷಲ್

ಮಿಂಡ್ ಮಿಲ್ಲರ್ ಎಂಬ ವಿದ್ವಾಂಸರು ಬರೆದಿರುವ "ಭಾರತದಲ್ಲಿ ಸಾಮ್ಯವಾದ" ಎಂಬ ವಿಚಾರ ಪೂರಿತವಾದ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ ೧೯೫೦ :- ಎಂ.ಎನ್. ರಾಯ್ ಮತ್ತು ಅವರ ಜೊತೆಗಾರರ ಮಧ್ಯದಲ್ಲಿ ಆಗಾಗ್ಗೆ ನಡೆಯುತ್ತಿದ್ದ ಹಣದ ವ್ಯವಹಾರಕ್ಕೆ ಬ್ರಿಟಿಷ್ ಗುಪ್ತದಳವು ತಡೆಯನ್ನು ಉಂಟುಮಾಡಿ ಹಣದ ಉಪಯೋಗದ ಬಗ್ಗೆ ಪರಸ್ಪರರಲ್ಲಿ ಸಂಶಯ ಉಂಟಾಗುವಂತೆಯೂ ಮತ್ತು ಹಣದ ದುರುಪಯೋಗವಾಗಿದೆಯೆಂಬ ಭಾವನೆ ಮೂಡುವಂತೆಯೂ ಮಾಡುತ್ತಿತ್ತು.

೧೯೨೦ ರ ದಶಕಗಳ ಬ್ರಿಟಿಷ್ ಗುಪ್ತದಳದ ಕಾರ್ಯ ಚಟುವಟಿಕೆಗಳ ಕಥೆಯನ್ನು ಓದಿದಾಗ ಯಾವ ರೀತಿ ಒಂದು ಬೃಹತ್ ಸಾಮ್ರಾಜ್ಯವು ಓರ್ವ ಕ್ರಾಂತಿಕಾರಿ ವ್ಯಕ್ತಿಯ ಚಟುವಟಿಕೆಗಳಿಂದ ಭೀತಿಗೊಳಗಾಗಿತ್ತು ಹಾಗೂ ರಾಯ್‌ರ ಸಹಪಿತೂರಿಗಾರರಲ್ಲಿ ಅವರ ವ್ಯಕ್ತಿತ್ವಕ್ಕೆ ಧಕ್ಕೆಯನ್ನುಂಟುಮಾಡುವುದರ ಮೂಲಕ ಯಾವ ರೀತಿ ಅದು ಅವರ ಕೆಲಸಕ್ಕೆ ಅಡ್ಡಿಯನ್ನುಂಟು ಮಾಡಲು ಪ್ರಯತ್ನಿಸುತ್ತಿತ್ತು ಎಂಬುದು ಗೊತ್ತಾಗುತ್ತದೆ.

ಮಿರತ್ ಪಿತೂರಿ ಮೊಕದ್ದಮೆ

ಮಿರತ್ ಪಿತೂರಿಯ ಮೊಕದ್ದಮೆ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಎಂ.ಎನ್. ರಾಯ್‌ರೊಂದಿಗೆ ಸಂಪರ್ಕವಿಟ್ಟುಕೊಂಡಿದ್ದ ಎಲ್ಲರನ್ನು ಕಾರಾಗೃಹಕ್ಕೆ ತಳ್ಳುವುದರ ಮೂಲಕ ಕಮ್ಯೂನಿಸ್ಟ್ ಪಕ್ಷದೊಂದಿಗಿನ ರಾಯ್‌ರವರ ಸಂಪರ್ಕವನ್ನು ಮುರಿಯಬೇಕೆಂಬ ಉದ್ದೇಶದಿಂದಲೇ ಆ ಮೊಕದ್ದಮೆಯನ್ನು ಹೂಡಲಾಗಿತ್ತೆಂದು ಗೊತ್ತಾಗುತ್ತದೆ. ಬ್ರಿಟಿಷ್ ಸರ್ಕಾರಕ್ಕೆ ದಿಢೀರನೆ ಗಾಬರಿ ಉಂಟುಮಾಡುವುದಕ್ಕೆ ಮತ್ತು ರಾಯ್‌ರವರ ಜೊತೆಗಾರರನ್ನು ಬಂಧಿಸುವುದಕ್ಕೆ "ಅಸೆಂಬ್ಲಿ ಲೆಟರ್" ಎಂಬ ಪತ್ರ ಕಾರಣವಾಗಿತ್ತೆಂದು ಆಗ ಭಾರತದಲ್ಲಿ ಬ್ರಿಟಿಷ್ ಗುಪ್ತದಳದ ನಿರ್ದೇಶಕನಾಗಿದ್ದ ಹೆಚ್. ಪಿಲಿಯಂಸನ್ ಹೇಳಿದ್ದಾನೆ. ಈ ಪತ್ರವು ಎಂ. ಎನ್. ರಾಯ್‌ರಿಂದ ಬರೆದುದಾಗಿರದೆ ಬ್ರಿಟಿಷ್ ಗುಪ್ತದಳವೇ ಅದನ್ನು ಸೃಷ್ಟಿಸಿ ಆಪಾದನೆಯನ್ನು ಎಂ. ಎನ್. ರಾಯ್‌ರವರ ಮೇಲೆ ಹೊರೆಸಿ ಮೊಕದ್ದಮೆಯನ್ನು ಹೂಡಿತ್ತು. ಸೆಪ್ಟೆಂಬರ್ ೧೦,೧೯೨೮ ರಂದು ಅಂದಿನ ಕೇಂದ್ರ ಅಸೆಂಬ್ಲಿಯಲ್ಲಿ ಒಂದು ಮಸೂದೆ ಚರ್ಚೆಗೆ ಬಂದಿತ್ತು. ಆ ಮಸೂದೆಯು ಸಾರ್ವಜನಿಕ ಸುರಕ್ಷತೆಯ ಬಗ್ಗೆ ಇತ್ತು. ಆ ಮಸೂದೆ ಕುರಿತು ಅಸೆಂಬ್ಲಿಯಲ್ಲಿ ಚರ್ಚೆ ನಡೆಯುತ್ತಿದ್ದಾಗ ಎಂ. ಎನ್. ರಾಯರು ಬರೆದಿದ್ದರೆಂದು ಆಪಾದಿಸಲಾಗಿದ್ದ ಪತ್ರವನ್ನು ಓದಲಾಗಿತ್ತು. ಆದ್ದರಿಂದ ಆ ಐತಿಹಾಸಿಕ ಪತ್ರಕ್ಕೆ ಅಸೆಂಬ್ಲಿ ಲೆಟರ್ ಎಂಬ ಹೆಸರು ಬಂತು. ಆಗ ಕೇಂದ್ರ ಅಸೆಂಬ್ಲಿಯ ಸದಸ್ಯರಾಗಿದ್ದ ಪಂಡಿತ್ ಮೋತಿಲಾಲ್ ನೆಹರೂ, ಲಾಲಾಲಜಪತ

ರಾಯ್ ಮತ್ತು ಇತರರು ಆ ಪತ್ರದ ನೈಜತೆಯನ್ನು ಪ್ರಶ್ನಿಸಿದರು. ಆದ್ದರಿಂದ ಸರ್ಕಾರವು ಆ ಕರಡು ಮಸೂದೆಯನ್ನು ಹಿಂದಕ್ಕೆ ತೆಗೆದುಕೊಂಡಿತು ಮತ್ತು ಪ್ರತ್ಯೇಕವಾದ ತುರ್ತು ಆದೇಶವನ್ನು ಹೊರಡಿಸಿ ರಾಯ್ ಮತ್ತು ಅವರ ಸಂಗಡಿಗರನ್ನು ಬಂಧಿಸಿತು. ಆದರೆ ರಾಯ್‌ರವರು ಕೊನೆಯವರೆಗೂ ಕಮ್ಯೂನಿಸ್ಟ್ ಪಕ್ಷದ ಜೊತೆಗೆ ಸಂಪರ್ಕವನ್ನಿರಿಸಿಕೊಂಡು ಬಂಡವಾಳಶಾಹಿ ಸಾಮ್ರಾಜ್ಯದ ವಿರುದ್ಧ ಹೋರಾಟ ಮಾಡುತ್ತಲೇ ಬಂದರು. ★

ಎಂ. ಎನ್. ರಾಯ್‌ರವರ ಸಂಕ್ಷಿಪ್ತ ಜೀವನ ಪರಿಚಯ

ಆಧುನಿಕ ಭಾರತದಲ್ಲಿ ವಿಶಿಷ್ಟ ಪ್ರೌಢಿಮೆಯಿಂದ ಬೆಳಗಿದ ವ್ಯಕ್ತಿ ಎಂ. ಎನ್. ರಾಯ್. ಅವರು ರಾಷ್ಟ್ರಜೀವನದಲ್ಲಿ ಮಹತ್ವದ ಹಾಗೂ ವ್ಯಾಪಕವಾದ ಪಾತ್ರವಹಿಸಿದ ಧುರೀಣ.

ಮಾನವೇಂದ್ರನಾಥ ರಾಯರ ಹುಟ್ಟು ಹೆಸರು ನರೇಂದ್ರ ಭಟ್ಟಾಚಾರ್ಯ. ಜನನ ೧೮೮೭ ಫೆಬ್ರವರಿ ೭ರಂದು. ವಿದ್ಯಾರ್ಥಿ ದೆಸೆಯಿಂದಲೂ ಕ್ರಾಂತಿಕಾರಿ ಪ್ರವೃತ್ತಿ ತೋರಿದ ಅವರು ವಿವೇಕಾನಂದ, ರಾಮತೀರ್ಥ, ದಯಾನಂದ ಸರಸ್ವತಿ, ಬಿಪಿನ್ ಚಂದ್ರಪಾಲ್, ಅರವಿಂದ ಘೋಷ್ ಮತ್ತು ವೀರ ಸಾವರ್ಕರ್ ಪ್ರಭಾವಕ್ಕೆ ಒಳಪಟ್ಟು "ಒಂದು ಕೈಯಲ್ಲಿ ಗೀತೆ ಇನ್ನೊಂದು ಕೈಯಲ್ಲಿ ಬಾಂಬು ಹಿಡಿದರು' ಎಂಬಂತೆ ಭಯೋತ್ಪಾದಕ ಚಟುವಟಿಕೆಗಳಿಗೆ ತೊಡಗಿದರು, 'ಯುಗಾಂತರ' ಕ್ರಾಂತಿಕಾರಿ ಗುಂಪಿನೊಂದಿಗೆ ಸಹಕರಿಸಿ ಜತಿನ್ ಮುಖರ್ಜಿ ಜೊತೆಗೆ ಕೆಲಸ ಮಾಡಿದರು.

೧೯೧೦ ರಲ್ಲಿ ಹೌರಾ ಒಳಸಂಚಿನ ಪ್ರಕರಣದಲ್ಲಿ ಸೆರೆಮನೆ ಕಂಡರು, ೧೯೧೫ ರಲ್ಲಿ ಕಲ್ಕತ್ತೆಯಲ್ಲಿ ರಾಜಕೀಯ ಡಕಾಯತಿಗಾಗಿ ಬಂಧಿಸಲ್ಪಟ್ಟರು. ಆದರೆ ಪಾರಾಗಿ ಡಚ್-ಇಂಡೀಸ್ ದ್ವೀಪಗಳಿಗೆ ಓಡಿಹೋದರು. ಅಲ್ಲಿಂದ ಜಾವಾ, ಫಿಲಿಪೀನ್ಸ್, ಕೋರಿಯ, ಮಂಚೂರಿಯ ಸುತ್ತಿ ಅಮೆರಿಕವನ್ನು ಸೇರಿ, ಮೆಕ್ಸಿಕೋಕ್ಕೆ ಹೋದರು. ಅಲ್ಲಿಯ ರಾಜ್ಯಕ್ರಾಂತಿಯಲ್ಲಿ ಭಾಗವಹಿಸಿದರು. ಕಮ್ಯೂನಿಸ್ಟರಾಗಿದ್ದ ಎಂ.ಎನ್. ರಾಯ್ ಬಾಲ್ಶೆವಿಕ್ ಕ್ರಾಂತಿಯ ಅನಂತರ ಲೆನಿನ್‌ರ ಕರೆಯಂತೆ ೧೯೨೦ ರಲ್ಲಿ ಮಾಸ್ಕೋಕ್ಕೆ ತೆರಳಿದರು.

ಮಾಸ್ಕೋದಲ್ಲಿ ಲೆನಿನ್‌ರ ಸಹಕಾರಿಗಳಾಗಿ, ಪಕ್ಷದ ಪ್ರಮುಖ ಸಮಿತಿಗಳ ಸದಸ್ಯರಾಗಿ, ೧೯೨೬ರ ವರೆಗೂ ಕೆಲಸ ಮಾಡಿದರು. ೧೯೨೨ರಲ್ಲಿ ಭಾರತದಲ್ಲಿ ಗಯಾ ಕಾಂಗ್ರೆಸ್ಸಿನ ಅಧ್ಯಕ್ಷ ಸಿ. ಆರ್. ದಾಸರಿಗೆ ಭಾರತದ ಸಾಮಾಜಿಕ ಆರ್ಥಿಕ ವಿಮೋಚನೆಯ ಕಾರ್ಯಕ್ರಮವನ್ನು ಸೂಚಿಸಿದರು. ೧೯೨೬ರಲ್ಲಿ ಕಾಮಿಂಟರ್ನ್ ಪ್ರತಿನಿಧಿಯಾಗಿ ಚೀನಕ್ಕೆ ಹೋಗಿ ೧೯೨೭ರ ಮಧ್ಯದ ತನಕ ಅಲ್ಲಿಯ ಕಮ್ಯೂನಿಸ್ಟ್ ಪಕ್ಷದ ಸಂಘಟನೆಗೆ ಮಾರ್ಗದರ್ಶನ ಮಾಡಿದರು. ಆದರೆ ಚೀನಿ ಕಮ್ಯೂನಿಸ್ಟರು ಅವರ ನಿರ್ದೇಶನದಂತೆ ನಡೆಯಲಿಲ್ಲ. ಈ ಅಪ

ಯುಶಸ್ಸಿನಿಂದಾಗಿ ಸ್ಟಾಲಿನ್‌ರೊಂದಿಗೆ ರಾಯ್ ಅವರಿಗೆ ತೀವ್ರ ಮತಭೇದ ವಾಯಿತು. ಮುಂದೆ ಎಂ. ಎನ್. ರಾಯರು ಸೋವಿಯತ್ ಕಮ್ಯೂನಿಸ್ಟ್ ಪಕ್ಷದಿಂದ ಹೊರತಳ್ಳಲ್ಪಟ್ಟರು.

ಭಾರತದಲ್ಲಿ ಸೈಮನ್ ಕಮಿಷನ್ ಬಂದಾಗಲೇ ಅವರು ಭಾರತ ತನ್ನ ಸ್ವಂತ ಸಂವಿಧಾನ ರೂಪಿಸಿಕೊಳ್ಳಲು ಪ್ರಪ್ರಥಮ ರಾಜ್ಯಾಂಗ ರಚನಾ ಪರಿಷತ್ತನ್ನು ರೂಪಿಸುವ ಸೂಚನೆ ಮಾಡಿದ್ದರು. ೧೯೩೧ ರ ಕರಾಚಿ ಕಾಂಗ್ರೆಸ್ಸಿನಲ್ಲಿ ಡಾ॥ ಮಹಮೂದ ಎಂಬ ಹೆಸರಿನಲ್ಲಿ ಮಾನವೇಂದ್ರರು ಭಾಗವಹಿಸಿದರು; ಪ್ರಸಿದ್ಧ ಕರಾಚಿ ಗೊತ್ತುವಳಿಗೆ ಪ್ರೇರಕರಾದರು. ಆಗ ಬ್ರಿಟಿಷ್ ಸರ್ಕಾರ ಅವರನ್ನು ಬಂಧಿಸಿ ೬ ವರ್ಷ ಸೆರೆಮನೆಯಲ್ಲಿಟ್ಟಿತು. ಹೊರಬಂದ ಮೇಲೆ ತಮಗಾಗಿ ಕಾಯುತ್ತಿದ್ದ ಅಮೆರಿಕನ್ ಪ್ರೇಯಸಿ ಎಲಿನ್ ಅವರನ್ನು ರಾಯ್ ಮದುವೆಯಾದರು.

ಕಾಂಗ್ರೆಸ್ ಸೇರಿ ಅದನ್ನು ಕ್ರಾಂತಿಕಾರಿ ಜನತಾ ಪಕ್ಷವಾಗಿಸಲು ಅವರು ದುಡಿದರು. ೧೯೩೭ರಲ್ಲಿ 'ಇಂಡಿಪೆಂಡೆಂಟ್ ಇಂಡಿಯಾ' ಸಾಪ್ತಾಹಿಕ ಆರಂಭಿಸಿದರು. ೧೯೪೯ರಲ್ಲಿ ಅದು 'ರಾಡಿಕಲ್ ಹ್ಯೂಮನಿಸ್ಟ್' ಎಂದು ಹೆಸರು ಪಡೆಯಿತು. ಇದಲ್ಲದೆ 'ಮಾರ್ಕ್ಸಿಯನ್ ವೇ' ಎಂಬ ತ್ರೈಮಾಸಿಕ, 'ವ್ಯಾನ್ ಗಾರ್ಡ್' ಎಂಬ ದೈನಿಕ ಪತ್ರಿಕೆಗಳನ್ನು ನಡೆಸಿದರು. ಅವರು ಪ್ರಭಾವೀ ಭಾಷಣಕಾರರೂ' ಪರಿಣಾಮಕಾರಿ ಲೇಖಕರೂ. ಆಗಿದ್ದರು.

೧೯೪೦ ರಲ್ಲಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕಾಗಿ ಸ್ಪರ್ಧಿಸಿದರು. ಸೋತು ಪಕ್ಷದಿಂದ ಹೊರಬಿದ್ದು ರ್‍ಯಾಡಿಕಲ್ ಡೆಮಾಕ್ರಾಟಿಕ್ ಪಕ್ಷ ಕಟ್ಟಿದರು. "ಇಂಡಿಯನ್ ಫೆಡರೇಷನ್ ಆಫ್ ಲೇಬರ್"ನ ಸ್ಥಾಪಕರು ಇವರು. ಆ ವೇಳೆಗೆ ಅವರು ಮಾರ್ಕ್ಸಿಸ್ಟರಾಗಿ ಉಳಿದಿರಲಿಲ್ಲ; ಮೂಲಗಾಮಿ ಮಾನವತಾವಾದಿಗಳಾಗಿದ್ದರು. ನವಮಾನವತಾವಾದವನ್ನು (ನ್ಯೂ ಹ್ಯೂಮನಿಸಂ) ಘೋಷಿಸಿದರು. ಪಕ್ಷರಹಿತ ರಾಜಕಾರಣವನ್ನು ಬೋಧಿಸಿದರು. ತಮ್ಮ ಪಕ್ಷವನ್ನು ವಿಸರ್ಜಿಸಿದರು.

೨ನೇಯ ಮಹಾಯುದ್ಧದಲ್ಲಿ ಅವರು ಮಿತ್ರ ರಾಷ್ಟ್ರಗಳ ಪರವಾಗಿದ್ದರು. ಕಾಂಗ್ರೆಸ್ಸಿನ ಆಗಸ್ಟ್ ಚಳುವಳಿ ಹಿಟ್ಲರನಿಗೂ ಮುಸೋಲಿನಿಗೂ ಅನೂಕೂಲವೆಂದು ಅದನ್ನು ಧಿಕ್ಕರಿಸಿದರು. ಯುದ್ಧದ ಆನಂತರ ಭಾರತಕ್ಕೆ ಸ್ವಾತಂತ್ರ್ಯ ಸಿಗುವುದೆಂದು ಸಾರಿದ್ದರು. ಸಕ್ರಿಯ ರಾಜಕಾರಣದಿಂದ ದೂರವಿದ್ದು ಡೆಹ್ರಡೂನಿನಲ್ಲಿ ಬೇಸಗೆ ಶಿಬಿರಗಳನ್ನು ನಡೆಯಿಸಿ ಮಾನವತಾವಾದದ ಪ್ರತಿಪಾದನೆ ಮತ್ತು ಪ್ರಸಾರ ಕೈಗೊಂಡರು. ಅನೇಕ ವಿಚಾರಬೋಧಕ ಗ್ರಂಥಗಳನ್ನು ಪ್ರಕಟಿಸಿದರು.

೧೯೫೪ ಜನವರಿ ೨೫ ರಂದು ಪಾರ್ಶ್ವವಾಯು ಆಘಾತದಿಂದ ನಿಧನ ಹೊಂದಿದರು. ಕೆಲವೇ ವರ್ಷಗಳಲ್ಲಿ ಅವರ ಪತ್ನಿ ಎಲೆನ್ ರಾಯ್ ಕಳ್ಳರ ಕೈಯಲ್ಲಿ ಕೊಲೆಯಾದರು.

KA-SKMND-470/-2000, [illegible]

Regd No: KAR/KAN/2000/3820

Vol 2 Issue 9,

Janapada Vichara – Kannada Monthly Digest Edited Printed and Published by Surendra Koulagi at Janapada Seva Trust Printing Press. Melkote on behalf of Janapada Seva Trust, (Regd) Melkote. Dist – Mandya 571 431.

Phone : 0823/648754